ಕರ್ನಾಟಕ ಸರ್ಕಾರ

ರೇಷ್ಮೆ ಇಲಾಖೆ

# ರೇಷ್ಮೆ ಕೃಷಿ

ಜುಲೈ-ಆಗಸ್ಟ್ 2023



## ಚಿಟ್ಟೆಕೊರೆದ ಹಾಗೂ ಕತ್ತರಿಸಿದ ರೇಷ್ಮೆಗೂಡುಗಳಿಂದ ತಯಾರಿಸಿದ ಕರಕುಶಲ ವಸ್ತುಗಳು









# ಕ್ಷೇತ್ರಮಟ್ಟದಲ್ಲಿ ರೇಷ್ಮೆ ಭಾಗೀಧಾರರಿಗೆ ಬಲವರ್ಧನಾ ಕಾರ್ಯಕ್ರಮಗಳು

















ರೇಷ್ಮೆ ಇಲಾಖೆ



# ಸಂಪಾದಕೀಯ.....



**ರಾಜೇಶ್‌ಗೌಡ ಎಂ.ಬಿ.,** ಭಾ.ಆ.ಸೇ.
ಪ್ರಧಾನ ಸಂಪಾದಕರು ಮತ್ತು
ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

2023–24ನೇ ಸಾಲಿನ ಜುಲೈ–23ರ ಅಂತ್ಯಕ್ಕೆ 1972 ಹೆಕ್ಟೇರ್ ಹಿಪ್ಪುನೇರಳೆ ನಾಟಿಯಾಗಿದ್ದು, ರಾಜ್ಯದಲ್ಲಿ ಪ್ರಸ್ತುತ 114630 ಹೆಕ್ಟೇರ್ ಹಿಪ್ಪುನೇರಳೆ ವಿಸ್ತೀರ್ಣವಿರುತ್ತದೆ. ರಾಜ್ಯದ 1,38,864 ರೇಷ್ಮೆ ಕೃಷಿಕರು ನಿರಂತರವಾಗಿ ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಂಡು ಜುಲೈ–23ರ ಅಂತ್ಯಕ್ಕೆ 27235 ಮೆಟ್ರಿಕ್ ಟನ್ ಗೂಡು ಉತ್ಪಾದಿಸಿರುತ್ತಾರೆ. ಇಲಾಖೆಯು ರೇಷ್ಮೆ ಗೂಡುಗಳ ವಹಿವಾಟಿಗೆ ರಾಜ್ಯದ ಪ್ರಮುಖ ಮಾರುಕಟ್ಟೆಗಳಲ್ಲಿ ಇ–ಹರಾಜು ವ್ಯವಸ್ಥೆಯನ್ನು ಅಳವಡಿಸಿದ್ದು, ಸುಗಮ ವಹಿವಾಟಿಗೆ ಕ್ರಮ ಕೈಗೊಳ್ಳಲಾಗಿದೆ. ರೇಷ್ಮೆ ನೂಲು ಬಿಚ್ಚಾಣಿಕೆ ಉದ್ದಿಮೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ 7059 ನೂಲು ಬಿಚ್ಚಾಣಿಕೆದಾರರಿಂದ ಜುಲೈ–23ರ ಅಂತ್ಯಕ್ಕೆ 3834 ಮೆಟ್ರಿಕ್ ಟನ್ ರೇಷ್ಮೆ ಉತ್ಪಾದನೆಯಾಗಿರುತ್ತದೆ.

ಪ್ರಸ್ತುತ ಸಾಲಿನಲ್ಲಿ ಅನಾವೃಷ್ಟಿಯಿಂದಾಗಿ ಹಿಪ್ಪುನೇರಳೆ ಎಲೆಯ ಉತ್ಪಾದನೆ ಮತ್ತು ಉತ್ಪಾದಕತೆಯ ಮೇಲೆ ಪರಿಣಾಮ ಬೀರಿದ್ದು, ಕಳಪೆ ಗುಣಮಟ್ಟದ ಹಿಪ್ಪುನೇರಳೆ ಸೊಪ್ಪಿನಿಂದಾಗಿ ರೇಷ್ಮೆ ಹುಳುಗಳು ರೋಗಗಳಿಗೆ ತುತ್ತಾಗುವ ಸಂಭವವಿರುತ್ತದೆ. ರೇಷ್ಮೆ ಬೆಳೆಗಾರರು ಮುಂಜಾಗ್ರತಾ ಕ್ರಮವಾಗಿ ನೀರಿನ ನಿರ್ವಹಣೆಯ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಾಗಿದೆ.

ಪ್ರಸ್ತುತ ಹಿಪ್ಪುನೇರಳೆ ತೋಟಗಳಲ್ಲಿ ಮೈಟ್ಸ್ ನುಸಿ ಮತ್ತು ಎಲೆ ಸುರುಳಿ ಕೀಟದ ಹಾವಳಿ ಅಧಿಕವಾಗಿದ್ದು, ಈ ಕೀಟಗಳ ಹಾವಳಿಯಿಂದಾಗಿ ಹಿಪ್ಪುನೇರಳೆ ಸೊಪ್ಪಿನ ಇಳುವರಿಯಲ್ಲಿ ಕುಂಟಿತವಾಗುವುದಲ್ಲದೆ ಗುಣಮಟ್ಟದಲ್ಲೂ ಕಳಪೆಯಾಗುತ್ತದೆ. ಇದರ ನೇರ ಪರಿಣಾಮ ರೇಷ್ಮೆ ಗೂಡಿನ ಇಳುವರಿ ಮತ್ತು ಗುಣಮಟ್ಟದ ಮೇಲೆ ಆಗುವುದರಿಂದ ರೇಷ್ಮೆ ಕೃಷಿಕರು ಸಕಾಲದಲ್ಲಿ ಸಮಗ್ರ ನಿರ್ವಹಣಾ ಕ್ರಮಗಳನ್ನು ಅನುಸರಿಸಿದರೆ ಹಿಪ್ಪುನೇರಳೆ ಪೀಡೆಗಳ ಹಾವಳಿಯನ್ನು ನಿಯಂತ್ರಿಸಬಹುದಾಗಿದೆ.

ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲಾ ಲೇಖನಗಳು ಮತ್ತು ಮಾಹಿತಿಗಳು ರೇಷ್ಮೆ ಭಾಗೀದಾರರಿಗೆ ಮತ್ತು ಚಂದಾದಾರರಿಗೆ ಉಪಯುಕ್ತವಾಗಲೆಂದು ಆಶಿಸಿದೆ.

ಪ್ರಧಾನ ಸಂಪಾದಕರು
**ರೇಷ್ಮೆ ಕೃಷಿ**




**ಪ್ರಧಾನ ಸಂಪಾದಕರು**

ಶ್ರೀ ರಾಜೇಶ್‌ಗೌಡ ಎಂ.ಬಿ., ಭಾ.ಆ.ಸೇ
ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ
ರೇಷ್ಮೆ ನಿರ್ದೇಶಕರು

**ಸಂಪಾದಕರು**

ಶ್ರೀ ಬಿ.ಆರ್. ನಾಗಭೂಷಣ್
ರೇಷ್ಮೆ ಹೆಚ್ಚುವರಿ ನಿರ್ದೇಶಕರು (ತಾಂತ್ರಿಕ)

**ಸಹ ಸಂಪಾದಕರು**

ಶ್ರೀಮತಿ ಮಂಜುಳಾದೇವಿ ಎನ್.ಟಿ.
ರೇಷ್ಮೆ ಉಪ ನಿರ್ದೇಶಕರು

ಶ್ರೀಮತಿ ಶೈಲಜ ಟಿ.ಎ.
ರೇಷ್ಮೆ ಸಹಾಯಕ ನಿರ್ದೇಶಕರು

**ಚಂದಾ ವಿವರ**

1. ಪ್ರತಿ : ರೂ. 20.00
2. ವಾರ್ಷಿಕ ಚಂದಾ : ರೂ. 120.00
3. ಆಜೀವ ಚಂದಾ : ರೂ. 1,500.00

ಚಂದಾ ಬಾಬ್ತನ್ನು
ಪ್ರಧಾನ ಸಂಪಾದಕರು, 'ರೇಷ್ಮೆ ಕೃಷಿ'
ಈ ಹೆಸರಿನಲ್ಲಿ ಬೇಡಿಕೆ ಹುಂಡಿ
ಪಡೆದು ಸಲ್ಲಿಸುವುದು

## ಈ ಸಂಚಿಕೆಯಲ್ಲಿ

ಸುಸ್ಥಿರ ಹಿಪ್ಪುನೇರಳೆ ಸೊಪ್ಪಿನ ಉತ್ಪಾದನೆಗೆ ಸೂಕ್ತ ನಾಟಿ ಅಂತರ ಮತ್ತು ಕಾಂಡದ ನಿರ್ವಹಣೆ 3

ರೇಷ್ಮೆ ಕೃಷಿ ವಲಯಕ್ಕೆ ಹೊಸ ಆಲೋಚನೆಗಳ ಕಿರಣ 6

ನೀರಾವರಿ ಕೃಷಿಯಲ್ಲಿ ನೀರಿನ ಪರೀಕ್ಷೆ ಏಕೆ ಮತ್ತು ಹೇಗೆ....? 8

ರೇಷ್ಮೆಕೃಷಿಯಲ್ಲಿ ಕೀಟನಾಶಕದಿಂದಾಗುವ ಸಮಸ್ಯೆಗಳು ಹಾಗೂ ಹತೋಟಿ ಕ್ರಮಗಳು 10

2023-24ನೇ ಸಾಲಿನಲ್ಲಿ ರೇಷ್ಮೆ ಭಾಗೀದಾರರಿಗೆ ಆದ್ಯತೆ ಮೇರೆಗೆ ಒದಗಿಸಲಾಗುವ ಸವಲತ್ತುಗಳ ವಿವರ 15

ರೇಷ್ಮೆ ತರಬೇತಿ ಸಂಸ್ಥೆ ಚನ್ನಪಟ್ಟಣದಲ್ಲಿ ಮಹಿಳೆಯರಿಗೆ ಏರ್ಪಡಿಸಿದ್ದ ಕರಕುಶಲ ತರಬೇತಿ ಕಾರ್ಯಕ್ರಮದ ವರದಿ 21

ಕೊಪ್ಪಳದಲ್ಲಿ ಜರುಗಿದ ರೇಷ್ಮೆ ಕೃಷಿ ಮೇಳದ ವರದಿ 24

ಸ್ಯಾನಿಟಾಲ್ ಪ್ಲಸ್ 26

ಸಂಜೀವಿನಿ 27

ಪ್ರಕಟಿತ ಲೇಖನಗಳಿಗೆ ಸಂಪಾದಕರ ಅನುಮೋದನೆ ಇದೆಯೆಂದು ಭಾವಿಸಬಾರದು. ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ.

**ವಿಳಾಸ**

ಪ್ರಧಾನ ಸಂಪಾದಕರು ಮತ್ತು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು
ರೇಷ್ಮೆ ನಿರ್ದೇಶನಾಲಯ, 5ನೇ ಮಹಡಿ, ಎಂ.ಎಸ್. ಬಿಲ್ಡಿಂಗ್
ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560 001
ಫೋನ್ : 080-23123930, 22256786, 22253862, 22353865
ಸಹಾಯವಾಣಿ : 9900881100, ಫ್ಯಾಕ್ಸ್ : 22353881
E-mail : seri-comm@karnataka.gov.in
https://sericulture.karnataka.gov.in

# ಸುಸ್ಥಿರ ಹಿಪ್ಪುನೇರಳೆ ಸೊಪ್ಪಿನ ಉತ್ಪಾದನೆಗೆ ಸೂಕ್ತ ನಾಟಿ ಅಂತರ ಮತ್ತು ಕಾಂಡದ ನಿರ್ವಹಣೆ

ಡಾ. ಕೆ. ಆರ್. ಶಶಿಧರ್, ಡಾ. ಅನಿಲ್‌ಕುಮಾರ್ ಎಸ್. ಮತ್ತು ಶ್ರೀ ಉಮೇಶನಾಯ್ಕ
ವಿಜ್ಞಾನಿಗಳು, ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ, ಟಮಕ, ಕೋಲಾರ–563 103, ಮೊ : 9242503992

ಹಿಪ್ಪುನೇರಳೆ ಗಿಡವು ರೇಷ್ಮೆ ಹುಳುವಿನ ಏಕೈಕ ಆಹಾರವಾಗಿದ್ದು ಬಹುವಾರ್ಷಿಕ ಬೆಳೆಯಾಗಿದೆ. ಎಲ್ಲಾ ರೀತಿಯ ಕೃಷಿ ಹವಾಗುಣಕ್ಕೆ ಹೊಂದಿಕೊಂಡು ಸೀಮಿತ ನೀರಿನ ಬಳಕೆಯೊಂದಿಗೆ ಹಿಪ್ಪುನೇರಳೆಯನ್ನು ವರ್ಷವಿಡಿ ಬೆಳೆಯಬಹುದು ಮತ್ತು ವರ್ಷಕ್ಕೆ ಐದು ಬಾರಿ ಸೊಪ್ಪು ಕಟಾವು ಮಾಡಿ ರೇಷ್ಮೆ ಹುಳು ಸಾಕಾಣಿಕೆಯನ್ನು ಯಶಸ್ವಿಯಾಗಿ ಕೈಗೊಳ್ಳಬಹುದು. ಸುಧಾರಿತ ಬೇಸಾಯ ಪದ್ಧತಿಗಳು ಹಿಪ್ಪುನೇರಳೆ ಗಿಡದ ಬೆಳವಣಿಗೆ ಮತ್ತು ಎಲೆಯ ಉತ್ಪಾದಕತೆಯ ಮೇಲೆ ಪ್ರಭಾವ ಬೀರುತ್ತವೆ. ವಿಶೇಷವಾಗಿ ಹೆಚ್ಚು ಅಂತರದ ನಾಟಿ ಪದ್ಧತಿ, ಏಕಕಾಂಡ ನಿರ್ವಹಣೆ, ಗಿಡಗಳಿಗೆ ಸೂಕ್ತ ಆಕಾರ ಮತ್ತು ಉಪಕಾಂಡಗಳ ನಿರ್ವಹಣೆ, ಅಂತರ ಬೇಸಾಯ ಕ್ರಮಗಳು, ಪೋಷಕಾಂಶಗಳ ಹಾಗೂ ಕೀಟ ಮತ್ತು ಪೀಡೆಗಳ ನಿರ್ವಹಣೆಯು ಪ್ರಮುಖ ಕಾರಣವಾಗಿವೆ. ರೇಷ್ಮೆಗೂಡಿನ ಇಳುವರಿಯು ಉತ್ತಮ ಗುಣಮಟ್ಟದ ಹಿಪ್ಪುನೇರಳೆ ಎಲೆಗಳ ಮೇಲೆ ನೇರವಾಗಿ ಅವಲಂಬಿತವಾಗಿದೆ.



## ಹೆಚ್ಚು ಅಂತರದಲ್ಲಿ ತೋಟ ನಿರ್ವಹಣೆಯ ಅವಶ್ಯಕತೆ ಏಕೆ?

- ಸಾಂಪ್ರದಾಯಿಕವಾಗಿ ದಕ್ಷಿಣ ಭಾರತದಲ್ಲಿ ರೈತರು ಹಿಪ್ಪುನೇರಳೆ ಸಾಲು ಮತ್ತು ಗಿಡಗಳ ನಡುವೆ ಮೂರು ಅಡಿಗಿಂತ ಕಡಿಮೆ ಅಂತರದಲ್ಲಿ ನಾಟಿ ಮಾಡುತ್ತಾರೆ, ಕಾರಣ ಸೊಪ್ಪು ಕಟಾವು ಬೇಗ ಮಾಡಬಹುದು ಹಾಗೂ ಕಡಿಮೆ ಅವಧಿಯಲ್ಲಿ ಹೆಚ್ಚು ಸೊಪ್ಪಿನ ಇಳುವರಿ ಪಡೆದು ರೇಷ್ಮೆಹುಳು ಸಾಕಾಣಿಕೆ ಕೈಗೊಳ್ಳಬಹುದು ಎಂಬುದಾಗಿದೆ. ಗಿಡಗಳ ನಡುವಿನ ಅಂತರ ಕಡಿಮೆ ಇದ್ದಷ್ಟೂ ಸೂರ್ಯನ ಬೆಳಕು, ತೇವಾಂಶ ಮತ್ತು ಪೋಷಕಾಂಶಗಳ ಬಳಕೆ ಕಡಿಮೆಯಾಗಿ ಗಿಡಗಳ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಇದರಿಂದಾಗಿ ಸೊಪ್ಪಿನ ಇಳುವರಿ ಮತ್ತು ಉತ್ಪಾದಕತೆ ಕುಂಠಿತಗೊಳ್ಳುವುದಲ್ಲದೆ ಈ ಕೆಳಗಿನ ಅನಾನುಕೂಲಗಳು ಉಂಟಾಗುವುದನ್ನು ಗಮನಿಸಬಹುದು.
- ಬಲಿತ ಎಲೆಗಳು ಬೇಗ ಹಳದಿ ಬಣ್ಣಕ್ಕೆ ತಿರುಗಿ ಹಣ್ಣಾಗುತ್ತವೆ.
- ಅಂತರಬೇಸಾಯ ಕ್ರಮಗಳ ನಿರ್ವಹಣೆ ಕಷ್ಟಕರವಾಗಿರುತ್ತದೆ.





❖ ಕೀಟ ಮತ್ತು ರೋಗಗಳ ಹಾವಳಿ ಹೆಚ್ಚು ಮತ್ತು ನಿರ್ವಹಣೆ ಕೂಡ ಕಷ್ಟಕರವಾಗಿರುತ್ತದೆ.

ಆದ್ದರಿಂದ, ಹಿಪ್ಪುನೇರಳೆ ಉತ್ಪಾದಕತೆಯನ್ನು ಹೆಚ್ಚಿಸಲು ಸಾಲುಗಳ ನಡುವಿನ ಅಂತರವನ್ನು ಹೆಚ್ಚಿಸುವುದು ಸೂಕ್ತ.

## ಹೆಚ್ಚಿನ ಅಂತರ

ಹೆಚ್ಚಿನ ಅಂತರದಲ್ಲಿ ಹಿಪ್ಪುನೇರಳೆಯನ್ನು ನಾಟಿ ಮಾಡುವ ಮೂಲಕ ಗುಣಮಟ್ಟದ ಹಿಪ್ಪುನೇರಳೆ ಸೊಪ್ಪಿನ ಉತ್ಪಾದಕತೆಯನ್ನು ಸಾಧಿಸಬಹುದು. ಇದರಿಂದ ಹಿಪ್ಪುನೇರಳೆ ತೋಟದಲ್ಲಿ ಹೆಚ್ಚು ಸೂರ್ಯನ ಬೆಳಕು, ಗಾಳಿಯ ಪ್ರಸರಣ ಮತ್ತು ಪೋಷಕಾಂಶಗಳು ಹೆಚ್ಚಾಗಿ ಸಿಗುವುದರಿಂದ ಗಿಡಗಳ ನಡುವಿನ ಸ್ಪರ್ಧೆಯನ್ನು ತಪ್ಪಿಸಬಹುದು. ಪ್ರೌಢಹುಳು ಸಾಕಾಣಿಕೆಗೆ ವಿ–1 ಹಾಗೂ ಜಿ–4 ಸೂಕ್ತವಾದ ಹಿಪ್ಪುನೇರಳೆ ತಳಿಗಳಾಗಿದ್ದು ಜೋಡಿ ಸಾಲು ಪದ್ಧತಿಯನ್ನು (150+90)× 60 ಸೆಂ.ಮೀ. ಅಥವಾ (5'+3') × 2' ಅನುಸರಿಸಿ ಬೆಳೆಸುವುದು. ಇತ್ತೀಚಿನ ದಿನಗಳಲ್ಲಿ ಗುಣಮಟ್ಟದ ಸೊಪ್ಪಿನ ಉತ್ಪಾದನೆ, ಅಂತರಬೇಸಾಯ, ಕೂಲಿಕಾರ್ಮಿಕರ ಕೊರತೆಯನ್ನು ನೀಗಿಸಲು, ಪವರ್ ಟಿಲ್ಲರ್ ಮತ್ತು ಟ್ರಾಕ್ಟರ್ ಚಾಲನೆಗೆ ರೇಷ್ಮೆ ಬೆಳೆಗಾರರು 9 ಅಡಿ × 3 ಅಡಿ, 6 ಅಡಿ ×4 ಅಡಿ ಇತ್ಯಾದಿ ಹೆಚ್ಚು ಅಂತರ ಅನುಸರಿಸಿ ನಾಟಿ ಮಾಡುವುದನ್ನು ಕಾಣಬಹುದು.

## ಕಟಾವು (ಸವರುವಿಕೆ) ನಿರ್ವಹಣೆ ಉದ್ದೇಶ

❖ ಸೂಕ್ತ ಆಕಾರ ಮತ್ತು ಗಾತ್ರವನ್ನು ನಿರ್ವಹಿಸಲು.
❖ ರೇಷ್ಮೆಹುಳು ಸಾಕಣೆಗಾಗಿ ಪೌಷ್ಟಿಕಾಂಶವುಳ್ಳ ಎಲೆಗಳನ್ನು ಪಡೆಯುವುದು.
❖ ವರ್ಷದಲ್ಲಿ ಐದು ಬಾರಿ ಸೊಪ್ಪು ಕಟಾವಿಗೆ ಸಹಕಾರಿಯಾಗಿದೆ.
❖ ಕಾಂಡದಲ್ಲಿ ಚಿಗುರಿನ ಬೆಳವಣಿಗೆಯನ್ನು ಉತ್ತೇಜಿಸುವುದು.
❖ ಸೂರ್ಯನ ಬೆಳಕು ಸಮರ್ಪಕವಾಗಿ ಪ್ರತಿ ಗಿಡಗಳಿಗೆ ದೊರೆಯುವಂತೆ ಮಾಡುವುದು.
❖ ಅಂತರ ಬೇಸಾಯ ಕ್ರಮಗಳನ್ನು ಸುಲಭವಾಗಿ ಅಳವಡಿಸಿಕೊಳ್ಳಬಹುದು.
❖ ಕೀಟ ಮತ್ತು ರೋಗಗಳ ಹಾವಳಿಯ ಪ್ರಮಾಣ (%) ನಿಯಂತ್ರಿಸುವುದು.

## ಹಿಪ್ಪುನೇರಳೆಯಲ್ಲಿ ಕಟಾವು ನಿರ್ವಹಣೆ ಮತ್ತು ಬೆಳೆಸುವಿಕೆ

❖ ಹಿಪ್ಪುನೇರಳೆಯನ್ನು ಒಂದೇ ಸಮನಾದ ಎತ್ತರಕ್ಕೆ ಕಟಾವು ಮಾಡುವುದರಿಂದ ಸರಿಯಾದ ಕಾಂಡದ ಅಭಿವೃದ್ಧಿ ಮತ್ತು ಆಕಾರ ನಿರ್ವಹಿಸಲು ಅನುಕೂಲವಾಗುತ್ತದೆ.
❖ ಇಡಿ ತೋಟವು ಒಂದೇ ಸಮನಾದ ಬೆಳವಣಿಗೆ ಕಂಡು ಬರುವುದರ ಜೊತೆಗೆ ಯಾಂತ್ರೀಕೃತ ಅಂತರ ಬೇಸಾಯ ಚಟುವಟಿಕೆಗಳಿಗೆ ಸಹಕಾರಿಯಾಗುತ್ತದೆ.
❖ ಒಂದೇ ಸಮನಾದ ಬೆಳವಣಿಗೆಯಿಂದ ಪೀಡೆಗಳ ಹಾವಳಿ ಕಡಿಮೆಯಾಗಿ ಸೊಪ್ಪಿನ ಉತ್ಪಾದಕತೆಯಲ್ಲಿ ಅಭಿವೃದ್ಧಿಯಾಗುತ್ತದೆ



## ತೋಟದ ಸ್ಥಾಪನೆ ಮತ್ತು ಕಾಂಡದ ಅಭಿವೃದ್ಧಿ

- ಹಿಪ್ಪುನೇರಳೆ ಸಸಿಗಳನ್ನು ಗುಳಿಯಲ್ಲಿ ನಾಟಿ ಮಾಡಿದ ನಂತರ ಸೊಪ್ಪಿನ ಕೊಯ್ಲು ಮಾಡದೆ 6 ತಿಂಗಳು ಬೆಳೆಯಲು ಬಿಟ್ಟು ಆಮೇಲೆ ಸೊಪ್ಪು ಕೀಳುವ ಮೂಲಕ ಮೊದಲನೇ ಹುಳು ಸಾಕಾಣಿಕೆಯನ್ನು ಆರಂಭಿಸಿ.
- ಏಕಕಾಂಡ ನಿರ್ವಹಣೆಗೆ ಆರೋಗ್ಯಕರ ಸಸಿಗಳನ್ನು ನೆಲದಿಂದ 45 ಸೆಂ.ಮೀ. ಎತ್ತರಕ್ಕೆ ಕತ್ತರಿಸುವುದು.
- ಕವಲು ರೆಂಬೆ ಬರುವುದನ್ನು ಪ್ರಾರಂಭದಲ್ಲೇ ತೆಗೆಯಬೇಕು.
- ಈ ರೀತಿ ಮಾಡುವುದರಿಂದ ತ್ವರಿತವಾಗಿ ರೆಂಬೆ ಬೆಳೆದು ಸದೃಢವಾಗುತ್ತವೆ.
- ಅನಂತರ ಪ್ರತೀ ಗಿಡದಲ್ಲಿ ಕನಿಷ್ಠ 3 ಬಲಿಷ್ಠ ಮತ್ತು ಆರೋಗ್ಯಕರ ರೆಂಬೆಗಳನ್ನು ಆಯ್ಕೆ ಮಾಡಿ ನೆಲದಿಂದ 55 ಸೆಂ.ಮೀ. ಎತ್ತರಕ್ಕೆ ಕತ್ತರಿಸಬೇಕು.
- ಪ್ರತಿ ಸಾಕಾಣಿಕೆಯ ನಂತರ ಎಲ್ಲಾ ರೆಂಬೆಗಳನ್ನೂ ನೆಲದಿಂದ 60 ಸೆಂ.ಮೀ. ಎತ್ತರಕ್ಕೆ ಕತ್ತರಿಸಿ ಮತ್ತು ದುರ್ಬಲ ಮತ್ತು ಒಣಗಿದ ರೆಂಬೆಗಳನ್ನು ತೆಗೆದುಹಾಕಬೇಕು.
- ಪ್ರತೀ ಗಿಡದಲ್ಲೂ 10–15 ಆರೋಗ್ಯಕರ ರೆಂಬೆಗಳನ್ನು ಬೆಳೆಯಲು ಬಿಡಬೇಕು.
- ಉತ್ತಮವಾಗಿ ಅಭಿವೃದ್ಧಿಯಾಗಿರುವ ಕಾಂಡಗಳಿರುವ ಹಿಪ್ಪುನೇರಳೆ ತೋಟವು ಆರೋಗ್ಯಕರ ಬೆಳವಣಿಗೆ ಮತ್ತು ಗುಣಮಟ್ಟದ ಸೊಪ್ಪಿನ ಉತ್ಪಾದನೆಗೆ ಅನುವು ಮಾಡಿಕೊಡುತ್ತದೆ.
- ಪ್ರತೀ ಗಿಡದಲ್ಲಿ ದುರ್ಬಲ ರೆಂಬೆಗಳನ್ನು ತೆಗೆದುಹಾಕಿ 10–15 ಆರೋಗ್ಯಕರ ರೆಂಬೆಗಳಿರುವಂತೆ ನೋಡಿಕೊಳ್ಳಬೇಕು.
- ರೆಂಬೆಗಳನ್ನು ಕತ್ತರಿಸಲು ಹರಿತವಾದ ಸಿಕೇಚರ್‌ಗಳನ್ನು ಉಪಯೋಗಿಸುವುದು ಸೂಕ್ತ. ಕಟಾವು ಮಾಡಿದ 30–40 ದಿನಗಳ ನಡುವೆ ಎಲ್ಲಾ ದುರ್ಬಲ ರೆಂಬೆಗಳನ್ನು ತೆಗೆಯುವುದು ಸೂಕ್ತ ಕಾಂಡದ ಅಭಿವೃದ್ಧಿಯಿಂದ ಯಾಂತ್ರೀಕೃತ ಕಟಾವು ಮಾಡುವುದು ಸುಲಭ.
- ಮಳೆಗಾಲದಲ್ಲಿ ಹಸಿರೆಲೆ ಗೊಬ್ಬರದ ಬೀಜಗಳನ್ನು ಎರಡು ಸಾಲುಗಳ ಮಧ್ಯೆ ಚೆಲ್ಲಿ ಹೂ ಬಿಡುವ ಮುನ್ನ ಪವರ್ ಟಿಲ್ಲರ್/ ರೋಟರಿ ವೀಡರ್ ಮೂಲಕ ಮಣ್ಣಿಗೆ ಸೇರಿಸಲು ಹೆಚ್ಚು ಅಂತರದ ನಾಟಿ ಪದ್ಧತಿ ಹೆಚ್ಚು ಸಹಕಾರಿಯಾಗಿದೆ.
- ಪ್ರತಿ ಬೆಳೆ ಕಟಾವಾದ 20–22ನೇ ದಿನದಲ್ಲಿ ಪ್ರತಿ ಎಕರೆಗೆ ಪ್ರತಿ ಬೆಳೆಗೆ 140 ಕೆ.ಜಿ ಅಮೋನಿಯಂ ಸಲ್ಫೇಟ್, 70 ಕೆ.ಜಿ ಸಿಂಗಲ್ ಸೂಪರ್ ಪಾಸ್ಫೇಟ್ ಹಾಗೂ 19 ಕೆ.ಜಿ ಮ್ಯೂರೇಟ್ ಆಫ್ ಪೊಟ್ಯಾಷ್ ಬಳಸಬೇಕು.
- ನೇರಗೊಬ್ಬರಗಳು ದೊರೆಯದಿದ್ದಲ್ಲಿ 15:15:15 ಕಾಂಪ್ಲೆಕ್ಸ್ 75 ಕೆ.ಜಿ + 37 ಕೆ.ಜಿ ಯೂರಿಯಾ ಮಿಶ್ರಣ ಮಾಡಿ ಪ್ರತಿ ಬೆಳೆಗೆ/ ಎಕರೆಗೆ ನೀಡಬೇಕು ಅಥವಾ 17:17:17 ಕಾಂಪ್ಲೆಕ್ಸ್ 66 ಕೆ.ಜಿ + 37 ಕೆ.ಜಿ ಯೂರಿಯಾ/ಪ್ರತಿ ಬೆಳೆಗೆ/ಎಕರೆಗೆ ಅಥವಾ 19:19:19 ಕಾಂಪ್ಲೆಕ್ಸ್ 59 ಕೆ.ಜಿ +37 ಕೆ.ಜಿ ಯೂರಿಯಾ/ಪ್ರತಿ ಬೆಳೆಗೆ/ಎಕರೆಗೆ ಬಳಸಬಹುದು.

## ಅನುಕೂಲಗಳು

- ತೋಟದ ನಿರ್ವಹಣೆ ಸುಲಭವಾಗುತ್ತದೆ.
- ಸೂಕ್ತ ಬೆಳವಣಿಗೆಗೆ ಸಾಕಷ್ಟು ಬೆಳಕು ಮತ್ತು ಸ್ಥಳಾವಕಾಶ ಒದಗುತ್ತದೆ. ಗಿಡದ ಬೆಳವಣಿಗೆ ಉತ್ತಮಗೊಂಡು ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ, ಸೊಪ್ಪಿನ ಕಟಾವು ಸುಗಮ ಗೊಳಿಸುತ್ತದೆ.
- ಎಲೆಗಳ ಉತ್ಪಾದಕತೆ ಮತ್ತು ಗುಣಮಟ್ಟವನ್ನು ಹೆಚ್ಚಿಸುತ್ತದೆ.



# ರೇಷ್ಮೆಕೃಷಿ ವಲಯಕ್ಕೆ ಹೊಸ ಆಲೋಚನೆಗಳ ಕಿರಣ

**(ರೇಷ್ಮೆ ಬೀಜೋತ್ಪಾದನೆಯಲ್ಲಿ ತಂತ್ರಜ್ಞಾನ ಸುಧಾರಿತ "Glossy sheet Egg Production Technology" ಅಳವಡಿಸುವ ಬಗ್ಗೆ ಸಂಶೋಧಕರು ಚಿಂತಿಸಬೇಕಿದೆ)**

ಲೇಖಕರು: ಡಾ. ಸುನಿಲ್ ಕುಮಾರ್ ಟಿ. ಮತ್ತು ಎಂ.ಎಸ್ಸಿ ರೇಷ್ಮೆ ಕೃಷಿ ವಿದ್ಯಾರ್ಥಿಗಳಾದ ಭುವನೇಶ್ವರ್ ರಾಜೇಶ್ ನಾಯಕ್, ಪ್ರೀತಿಶ್ ಚೌಹಾನ್, ಕೃತಿಕಾ ಎಂ.ಎಸ್. ಮತ್ತು ರಕ್ಷಿತಾ ಎಂ.ಪಿ. ಇವರ ಜೊತೆ ಎಂ.ಎಸ್ಸಿ ಬೇಸಾಯಶಾಸ್ತ್ರ ವಿದ್ಯಾರ್ಥಿಗಳಾದ ಪ್ರವೀಣ್ ಕುಮಾರ್ ಗೌಡ ಎನ್.ಎಂ. ಮತ್ತು ರಕ್ಷಿತಾ ಕೆ.ಆರ್.
ರೇಷ್ಮೆ ಕೃಷಿ ಮಹಾವಿದ್ಯಾಲಯ, ಚಿಂತಾಮಣಿ, ಮೊ : 9900613094

'ಪ್ರಯೋಗಗಳಿಲ್ಲದೆ ವಿಜ್ಞಾನವಿಲ್ಲ' (There's no science without experiments) ಎಂಬ ನಿಲುವನ್ನು ಮಿಷನ್ ಮಂಗಳ್ ಅನ್ನುವ ಹಿಂದಿ ಚಿತ್ರ 2019ರಲ್ಲಿ ಬಹುತೇಕ ಭಾರತೀಯ ಯುವಕರ ಕಣ್ಣುಗಳನ್ನು ಅಚ್ಚರಿ ಪಡುವಂತೆ ಮಾಡಿದೆ. ಯಾವುದೇ ವಲಯಗಳಲ್ಲಿ ಹೊಸ ಆಲೋಚನೆಗಳಿಗೆ ಆದ್ಯತೆ ಸಿಗುತ್ತದೆ ಎಂದರೆ ಆ ನಾಡು ವೈಜ್ಞಾನಿಕವಾಗಿ ದಾಪುಗಾಲಿಡುತ್ತದೆ. ಭಾರತೀಯ ರೇಷ್ಮೆ ಕೃಷಿ ತನ್ನದೆ ಆದ ಗಣನೀಯ ಹೆಜ್ಜೆ ಗುರುತನ್ನು ಇಡುವುದರ ಮೂಲಕ 2022ನೇ ಸಲಿನಲ್ಲಿ 34,903 ಮೆಟ್ರಿಕ್ ಟನ್ ರೇಷ್ಮೆ ಉತ್ಪಾದಿಸುವುದರ ಜೊತೆ ಸರಿ ಸುಮಾರು 87 ಲಕ್ಷ ಜನರಿಗೆ ಬದುಕನ್ನು ಕಲ್ಪಿಸಿಕೊಡುತ್ತಿದೆ.

ಅಲ್ಲದೆ 2023–24ರ ವೇಳೆಗೆ 48,800 ಮೆಟ್ರಿಕ್ ಟನ್ ರೇಷ್ಮೆ ಉತ್ಪಾದಿಸುವ ಗುರಿಯನ್ನು ಇಟ್ಟುಕೊಂಡಿರುವ ಭಾರತೀಯ ರೇಷ್ಮೆ ವಲಯಕ್ಕೆ ರೇಷ್ಮೆ ಮೊಟ್ಟೆಗಳ ತಂತ್ರಜ್ಞಾನ ಅತ್ಯಂತ ಪರಿಣಾಮಕಾರಿ ಯಾಗಿ ಸಹಾಯ ಮಾಡುತ್ತದೆ. ಪ್ರಸ್ತುತ ಕರ್ನಾಟಕದಲ್ಲಿ 575 ಲಕ್ಷ ರೇಷ್ಮೆ ಮೊಟ್ಟೆಗಳ ಉತ್ಪಾದಿಸುವುದರ ಮೂಲಕ ಭಾರತದಾದ್ಯಂತ ಕರ್ನಾಟಕ ಮುಂಚೂಣಿಯಲ್ಲಿದೆ.

ರೇಷ್ಮೆ ಕೃಷಿ ಲಾಭದಾಯಕವಾಗಲು ತಗಲುವ ಖರ್ಚನ್ನು ತಗ್ಗಿಸುವ ಸಲುವಾಗಿ ರೇಷ್ಮೆ ಬಿತ್ತನೆ ಕೋಠಿಯಲ್ಲಿ ಹೊಸ ಆಲೋಚನೆಯ ಮಾದರಿಗಳು ಬರಬೇಕಾಗಿವೆ. ಸಾಮಾನ್ಯವಾಗಿ ಇಂದಿನ ದಿನಮಾನಗಳಲ್ಲಿ ಬಿತ್ತನೆ ಕೋಠಿಯಲ್ಲಿ ಬಳಸಲಾಗುತ್ತಿರುವ ಮೊಟ್ಟೆ ಹಾಳೆಗಳು ಪುನರ್ ಬಳಸಲು ಆಗುವುದಿಲ್ಲ. ಪ್ರತಿ ಬಿತ್ತನೆ ಕೋಠಿಯೊಂದರಲ್ಲಿಯೇ ವರ್ಷಕ್ಕೆ ಕೇವಲ ಮೊಟ್ಟೆ ಹಾಳೆಗೆ ತಗಲುವ ವೆಚ್ಚ ಲಕ್ಷಗಳೇ ಆಗಿದೆ. ಅಲ್ಲದೆ ಬಿಡಿ ಮೊಟ್ಟೆ ಹಾಳೆ ತಯಾರಿಸಲು ಮೈದಾಹಿಟ್ಟಿನ ಅಂಟು, ಸೋಂಕು ನಿವಾರಕವಾಗಿ ಬ್ಲೀಚಿಂಗ್ ಪೌಡರ್, ಮೊಟ್ಟೆ ಬಿಡಿಸಲು ಹೆಚ್ಚು ನೀರಿನ ಬಳಕೆ, ಕೂಲಿ ಆಳುಗಳಿಗೆ ತಗಲುವ ವೆಚ್ಚ ಎಲ್ಲವೂ ಸೇರಿ ಕೊನೆಗೆ ಸಾಮಾನ್ಯವಾಗಿ ಒಂದು ಮೊಟ್ಟೆಗೆ (1 ಡಿ.ಎಫ್.ಎಲ್‌ಗೆ) 10 ರೂಗಳವರೆಗೆ ಖರ್ಚು ಬರುತ್ತದೆ. ಆದ್ದರಿಂದ ಈ ಖರ್ಚು ವೆಚ್ಚ ಗಳನ್ನು ತಗ್ಗಿಸುವ ಸಲುವಾಗಿ ವಿದ್ಯಾರ್ಥಿಗಳ ತಂಡವೊಂದು ಸಹಾಯಕ ಪ್ರಾಧ್ಯಾಪಕರ ಮಾರ್ಗದರ್ಶನ ದೊಂದಿಗೆ ಹೊಸ ಆಲೋಚನೆಯಲ್ಲಿ ಪರಿಹಾರ ಕಂಡು ಕೊಳ್ಳುತ್ತಿದ್ದಾರೆ `Glossy Sheet Egg Production Technology' ಅನ್ನುವ ಹೊಸ ಆಯಾಮದಂತೆ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ರೇಷ್ಮೆ ಕೃಷಿ ಮಹಾವಿದ್ಯಾಲಯ, ಚಿಂತಾಮಣಿ ಇಲ್ಲಿನ ಎಂ.ಎಸ್ಸಿ ರೇಷ್ಮೆ ಕೃಷಿ ವಿದ್ಯಾರ್ಥಿಗಳಾದ ಭುವನೇಶ್ವರ್ ರಾಜೇಶ್ ನಾಯಕ್, ಪ್ರೀತಿಶ್ ಚೌಹಾನ್, ಕೃತಿಕಾ ಎಂ.ಎಸ್. ಮತ್ತು ರಕ್ಷಿತಾ ಎಂ.ಪಿ ಇವರ ಜೊತೆ ಎಂ.ಎಸ್ಸಿ ಬೇಸಾಯಶಾಸ್ತ್ರ ವಿದ್ಯಾರ್ಥಿಗಳಾದ ಪ್ರವೀಣ್‌ಕುಮಾರ್ ಗೌಡ, ಎನ್.ಎಂ. ಮತ್ತು ರಕ್ಷಿತಾ, ಕೆ.ಆರ್ ಇವರು ಭಾಗಿಯಾಗುವುದರ ಮೂಲಕ ಡಾ. ಸುನಿಲ್‌ಕುಮಾರ್ ಟಿ. ಅವರ ಮಾರ್ಗದರ್ಶನದಲ್ಲಿ ರೇಷ್ಮೆ ಚಿಟ್ಟೆಗಳು ಮೊಟ್ಟೆ ಇಡಲು ಪೇಪರ್ ಹಾಳೆ ಬದಲು ಗ್ಲಾಸಿ ಹಾಳೆಯನ್ನು ಬಳಸಲಾಯಿತು. ನುಣುಪಾದ ಗ್ಲಾಸಿ ಹಾಳೆಯನ್ನು ಚಿಟ್ಟೆಗಳು ಒಪ್ಪಿಕೊಂಡಿದ್ದು, ಮೊಟ್ಟೆ ಇಳುವರಿ



"Glossy sheet Egg Production Technology" ಎನ್ನುವ ಹೊಸ ಆಲೋಚನೆಯ ಮಾದರಿಯನ್ನು ಕಂಡುಕೊಂಡ ವಿದ್ಯಾರ್ಥಿಗಳ ತಂಡ ಮತ್ತು ಮಾರ್ಗದರ್ಶಕರಾದ ಡಾ. ಸುನಿಲ್ ಕುಮಾರ್, ಟಿ ಇವರ ಜೊತೆ ರೇಷ್ಮೆ ಬಿತ್ತನೆ ಪ್ರಯೋಗಾಲಯಕ್ಕೆ ಡೀನ್‌ರವರಾದ ಡಾ. ವೆಂಕಟರವಣ ಪಿ ರವರು ಭೇಟಿ ಕೊಟ್ಟು ಮಾದರಿಯನ್ನು ಪರೀಕ್ಷಿಸಿದ ಕ್ಷಣ



ಗ್ಲಾಸಿ ಹಾಳೆ ಬಳಸಿಕೊಂಡು ಬಿಡಿ ಮೊಟ್ಟೆ ತಯಾರಿಸಿರುವುದು



ಗ್ಲಾಸಿ ಹಾಳೆ ಬಳಸಿಕೊಂಡು ಬಿಡಿ ಮೊಟ್ಟೆ ತಯಾರಿಸಿರುವುದು



"Glossy Sheet Egg Production Technology" ಎನ್ನುವ ಹೊಸ ಆಲೋಚನೆಯ ಮಾದರಿಯನ್ನು ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿ, ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿ, ಚಿಂತಾಮಣಿಯಲ್ಲಿ ರೇಷ್ಮೆ ಸಹಾಯಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್‌ರವರಿಗೆ ವಿದ್ಯಾರ್ಥಿಗಳ ತಂಡ ವಿವರಿಸಿ ಪರಿಚಯಿಸಿತು.

## ಸೂಚನೆ

"Glossy Sheet Egg Production Technology" ಎನ್ನುವ ಹೊಸ ಆಲೋಚನೆಯೊಂದು ಈ ಕ್ಷಣಕ್ಕೆ ಕುಡಿಯೊಡೆದಿದೆ, ಇದು ಈ ಕ್ಷಣಕ್ಕೆ ಆರಂಭಿಕ ಹಂತದಲ್ಲಿದ್ದು, ಕೆಲವು ಸಕಾರಾತ್ಮಕ ಫಲಿತಾಂಶವನ್ನು ನೀಡಿದೆ. ಇದು ಮುಂದಿನ ಕೆಲವು ಫಲಿತಾಂಶಗಳು ಬರುವವರೆಗೆ ಕಾಯಬೇಕಿದೆ. ಅಲ್ಲದೆ ಈ ಮಾದರಿಯನ್ನು ಸುಧಾರಿಸುವ ಉತ್ತಮ ಆಲೋಚನೆಗಳು ನಿಮ್ಮಲ್ಲಿ ಇದ್ದಲ್ಲಿ ಕೆಳಗೆ ನೀಡಿರುವ ನಂಬರಿಗೆ ಕರೆ ಮಾಡತಕ್ಕದ್ದು.

**ಡಾ. ಸುನೀಲ್ ಕುಮಾರ್, 9900613094**

ಉತ್ತಮವಾಗಿರುತ್ತದೆ ಅಲ್ಲದೆ ಈ ಹಾಳೆಗಳ ಮೇಲೆ ಯಾವುದೇ ರೀತಿಯ ಅಂಟು ದ್ರಾವಣವಾಗಿ ಮೈದಾ, ಮೊಟ್ಟೆ ಬಿಡಿಸಲು ಬ್ಲೀಚಿಂಗ್ ದ್ರಾವಣವನ್ನಾಗಲಿ ಬಳಸದೆ ಚಿಟ್ಟೆಗಳಿಂದ ಮೊಟ್ಟೆ ಇರಿಸುವ ಹೊಸ ಆಲೋಚನೆಗೆ ನಾಂದಿ ಹಾಕಿದ್ದಾರೆ.

ಈ ಗ್ಲಾಸಿ ಹಾಳೆಗಳನ್ನು ಪುನರ್ ಬಳಸಬಹುದಾಗಿದ್ದು ಖರ್ಚು–ವೆಚ್ಚವನ್ನು ಉಳಿತಾಯ ಮಾಡುತ್ತದೆ. ಅಲ್ಲದೆ ಮೊಟ್ಟೆ ಇಟ್ಟ 7ನೇ ದಿನಕ್ಕೆ ಮೊಟ್ಟೆ ಭರಿತ ಗ್ಲಾಸಿ ಹಾಳೆಗೆ ಸ್ವಲ್ಪ ಉಷ್ಣಾಂಶದ ಉಪಚಾರ ಮಾಡಿದರೆ ಮೊಟ್ಟೆಗಳು ತಾವಾಗಿಯೇ ಹಾಳೆಯಿಂದ ಬೇರ್ಪಡುತ್ತವೆ. ಎಂಬುದನ್ನು ಪ್ರಯೋಗದಲ್ಲಿ ಕಂಡುಕೊಳ್ಳಲಾಗಿದೆ.

ಈ ಮಾದರಿಯ ಬಗ್ಗೆ ವಿವಿಧ ವಿಜ್ಞಾನ ಶಾಖೆಯ ವಿದ್ಯಾರ್ಥಿಗಳೂ ಗಮನಹರಿಸಿ ಹೊಸ ಮಾದರಿಯೊಂದು ತಯಾರಿಸಲು ಸ್ವಾಗತ ಕೋರಲಾಗಿದೆ. ಚಿಂತಾಮಣಿಯ ರೇಷ್ಮೆ ಕೃಷಿ ಮಹಾವಿದ್ಯಾಲಯ, ಡೀನ್‌ರವರಾದ ಡಾ.ವೆಂಕಟರಮಣ ಪಿ, ರವರು ಮತ್ತು ರೇಷ್ಮೆ ಕೃಷಿ ವಿಭಾಗದ ಮುಖ್ಯಸ್ಥರಾದ ಡಾ. ರಾಮಕೃಷ್ಣನಾಯ್ಕರವರು ರೇಷ್ಮೆ ಬೀಜೋತ್ಪಾದನೆ ಪ್ರಯೋಗಾಲಯಕ್ಕೆ ಭೇಟಿ ನೀಡಿ ವಿದ್ಯಾರ್ಥಿ ಮಿತ್ರರು ಮತ್ತು ಸಹಾಯಕ ಪ್ರಾಧ್ಯಾಪಕರ ಹೊಸ ಆಲೋಚನೆಗೆ ಬೆನ್ನು ತಟ್ಟುವುದರ ಮೂಲಕ ಇನ್ನೂ ಮರುಸಂಶೋಧನೆಯಲ್ಲಿ ಮುನ್ನಡೆಯಲು ಪ್ರೋತ್ಸಾಹ ನೀಡಿರುತ್ತಾರೆ.

'ವೈಜ್ಞಾನಿಕ ಆಲೋಚನೆಗಳ ಆಧಾರಿತ ಪ್ರಯೋಗದಿಂದ ಉತ್ತಮ ವಿಜ್ಞಾನ ನಿಲ್ಲಬಲ್ಲದು' ಎಂಬ ನೆಲೆಗಟ್ಟಿನಲ್ಲಿ ಈ ಪ್ರಯೋಗ ಸಾಗಬೇಕಿದೆ. ಈ ಮಾದರಿಗೆ ಹೊಸ ಆಲೋಚನೆಯನ್ನು ಜೋಡಿಸುವ ಮನಸುಗಳು ಜೊತೆಗೂಡಿದರೆ ಖಂಡಿತ 'Glossy Sheet Egg Production Technology' ಭರವಸೆಯನ್ನು ಮೂಡಿಸುವ ಮಾದರಿಯಾಗಿ ಮುಂದಿನ ದಿನಗಳಲ್ಲಿ ಬರಲಿದೆ.




**Glossy sheet egg production technology in sericulture concept bagged the best startup award 2023**

# ನೀರಾವರಿ ಕೃಷಿಯಲ್ಲಿ ನೀರಿನ ಪರೀಕ್ಷೆ ಏಕೆ ಮತ್ತು ಹೇಗೆ....?

ಲೇಖಕರು: ಡಾ. ಎಸ್. ಅನಿಲ್‌ಕುಮಾರ್, ಡಾ. ಶಶಿಧರ್ ಕೆ. ಆರ್. ಮತ್ತು ಡಾ. ಆಶಾ ಕೆ. ಎಂ.
ವಿಜ್ಞಾನಿಗಳು, ಐಸಿಎಆರ್ – ಕೃಷಿ ವಿಜ್ಞಾನ ಕೇಂದ್ರ, ಟಮಕ, ಕೋಲಾರ–563103 ಮೊ : 97431 96196

ನೀರಾವರಿಯೆಂದರೆ ಬೆಳೆಗಳ ಬೆಳವಣಿಗೆಗೆ ಅವಶ್ಯವಾದ ನೀರನ್ನು ಒದಗಿಸುವುದು. ಮಳೆ ನೀರು ಭೂಮಿ ಸೇರುವ ತನಕ ಪರಿಶುದ್ಧವಾಗಿದ್ದು ಸೇರಿದ ನಂತರ ಅಲ್ಲಿರುವ ಲವಣಾಂಶಗಳ ಜೊತೆ ಬೆರೆತು ಬಾವಿ, ಕೆರೆ, ನಾಲೆ ಸೇರುತ್ತದೆ. ಹೀಗೆ ನೀರು ಹರಿದು ಬರುವ ಪ್ರದೇಶವು ಸಾಕಷ್ಟು ಪ್ರಮಾಣದಲ್ಲಿ ಚೌಳು ಅಥವಾ ಕ್ಷಾರವಾಗಿ ಬೆಳೆಯ ಮೇಲೆ ದುಷ್ಪರಿಣಾಮ ಬೀರುವುದಲ್ಲದೆ ಇಳುವರಿ ಸಹ ಕಡಿಮೆಯಾಗುತ್ತದೆ. ನೀರಾವರಿ ನೀರಿನ ಗುಣಮಟ್ಟವನ್ನು ತಿಳಿದುಕೊಳ್ಳದೇ ನೀರಾವರಿಗೆ ಬಳಸುವುದರಿಂದ ಮಣ್ಣು ಹಾಗೂ ಬೆಳೆ ಇವೆರಡರ ಆರೋಗ್ಯ ಹದಗೆಡುತ್ತದೆ.

ಮಣ್ಣಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರಿದ್ದಾಗಲೂ ಬೆಳೆಯಲ್ಲಿ ನೀರಿನ ಕೊರತೆ ಕಂಡುಬರುವುದಕ್ಕೆ ಮುಖ್ಯ ಕಾರಣ ನೀರಿನ ಚೌಳುತನ. ಸೋಡಿಯಂನ ಅಂಶ ಜಾಸ್ತಿಯಿರುವ ನೀರನ್ನು ನೀರಾವರಿಗೆ ಬಳಸುವುದರಿಂದ ಮಣ್ಣಿನ ಕಣ ಜೋಡಣೆ ಹಾಳಾಗುವುದರ ಜೊತೆಗೆ ಬೆಳೆಯಲ್ಲಿ ಸೋಡಿಯಂನ ಅಂಶ ಹೆಚ್ಚಾಗಿರುವುದು ಕಂಡುಬರುತ್ತದೆ. ಮಣ್ಣು ಪರೀಕ್ಷಾ ಕೇಂದ್ರಗಳಲ್ಲಿ ನೀರಿನ ಭೌತಿಕ, ರಾಸಾಯನಿಕ ಹಾಗೂ ಜೈವಿಕ ಗುಣಧರ್ಮಗಳನ್ನು ವಿಶ್ಲೇಷಿಸಲಾಗುತ್ತದೆ. ನೀರಾವರಿಗೆ ಬಳಸುವ ನೀರು, ಬಣ್ಣ, ವಾಸನೆ, ನೊರೆ, ರಾಡಿ ಹಾಗೂ ಕಸ–ಕಡ್ಡಿ ರಹಿತವಾಗಿರಬೇಕು. ನೀರಾವರಿಯ ನೀರಿನ ಬೇರೆ ಮೂಲಗಳಿಗೆ ಹೋಲಿಸಿ ನೋಡಿದರೆ ಕೈಗಾರಿಕೆ ಹಾಗೂ ಗೃಹ ಬಳಕೆಯಿಂದ ದೊರೆತ ತ್ಯಾಜ್ಯ ನೀರಿನಲ್ಲಿ ನೀರಿನ ಈ ಭೌತಿಕ ಗುಣಧರ್ಮಗಳನ್ನು ವಿಶ್ಲೇಷಿಸುವುದು ತುಂಬಾ ಉಪಯುಕ್ತ.

## ನೀರಿನ ಮಾದರಿ ಶೇಖರಣೆ

ನೀರಿನ ಮಾದರಿ, ಶೇಖರಣೆ ಮತ್ತು ವಿಶ್ಲೇಷಣೆಗಳು, ನೀರಾವರಿ ನೀರು ಪರೀಕ್ಷೆಯ ವಿವಿಧ ಹಂತಗಳು. ನೀರು ಪರೀಕ್ಷೆಯ ಫಲಿತಾಂಶ ಈ ಎಲ್ಲಾ ಹಂತಗಳ ಮೇಲೆ ಅದರಲ್ಲೂ ನೀರಿನ ಮಾದರಿ ತೆಗೆಯುವುದರ ಮೇಲೆ ಹೆಚ್ಚು ಅವಲಂಬಿಸಿರುವುದರಿಂದ ನೀರಿನ ಮಾದರಿಯು ವೈಜ್ಞಾನಿಕವಾಗಿದ್ದು, ನೀರಾವರಿಗೆ ಬಳಸುವ ನೀರಿನ ಮೂಲವನ್ನು ಪ್ರತಿನಿಧಿಸಬೇಕು. ನೀರಿನ ಮಾದರಿಯನ್ನು ತೆಗೆಯಲು ಹೊಸದಾದ ಪ್ಲಾಸ್ಟಿಕ್ ಅಥವಾ ಗಾಜಿನ ಬಾಟಲಿಗಳನ್ನು ಬಳಸಬೇಕು. ಕೊಳವೆ ಬಾವಿಯ ನೀರಿನ ಮಾದರಿ ತೆಗೆಯುವ ಮೊದಲು 10–15 ನಿಮಿಷಗಳ ಕಾಲ ನೀರು ಹರಿದು ಹೋಗಲು ಬಿಟ್ಟು ನಂತರ ನೀರನ್ನು ಸಂಗ್ರಹಿಸಬೇಕು. ಬಾವಿ, ನದಿ, ಕೆರೆ, ಹಳ್ಳ–ಕೊಳ್ಳ ಹಾಗೂ ನಾಲೆಗಳ ಮಧ್ಯಭಾಗದಿಂದ ನೀರನ್ನು ಶೇಖರಣೆಗಳಲ್ಲಿ ನಾಲ್ಕು ಬಾರಿ ಸಂಗ್ರಹಿಸಿ ಹೊರಚೆಲ್ಲಿ ಐದನೇ ಬಾರಿ ಸಂಗ್ರಹಿಸಿದ ನೀರನ್ನು ವಿಶ್ಲೇಷಣೆಗೊಳಪಡಿಸಬೇಕು. ನೀರಲ್ಲೇನಾದರೂ ಕಸ–ಕಡ್ಡಿಗಳಿದ್ದರೆ



ನೀರನ್ನು ಸೋಸಿ ಸಂಗ್ರಹಿಸಬೇಕು.

ನೀರಿನ ಮಾದರಿ ತುಂಬಿದ ಶೇಖರಣೆಗಳ ಮೇಲೆ ರೈತರ ಹೆಸರು, ನೀರಾವರಿ ನೀರಿನ ಮೂಲ, ಊರು, ನೀರಿನ ಮಾದರಿ ತೆಗೆದ ದಿನಾಂಕ ಮುಂತಾದವುಗಳನ್ನು ನಮೂದಿಸಬೇಕು. ನೀರಿನ ಮಾದರಿಯ ವಿಶ್ಲೇಷಣೆಯನ್ನು ವಿಳಂಬವಾಗಿ ಮಾಡುವುದು ಅನಿವಾರ್ಯವಾದರೆ ನೀರಿಗೆ 2–3 ಹನಿ ಟಾಲಿನ್ ರಾಸಾಯನಿಕವನ್ನು ಹಾಕಬೇಕು. ಇಲ್ಲವೇ ನೀರನ್ನು 40 ಲೀಟರ್‌ನಲ್ಲಿ ಶಿತಲೀಕರಣಕ್ಕೊಳಪಡಿಸಬೇಕು. ಇಲ್ಲವಾದರೆ ನೀರಲ್ಲಿರುವ ಸೂಕ್ಷ್ಮ ಜೀವಿಗಳು ನೀರಿನ ಜೈವಿಕ–ರಾಸಾಯನಿಕ ಗುಣಧರ್ಮಗಳನ್ನು ಬದಲಾಯಿಸುತ್ತವೆ.

## ಫಲಿತಾಂಶ ವಿಶ್ಲೇಷಣೆ

ನೀರಾವರಿಗೆ ಬಳಸುವ ನೀರಿನ ರಸಸಾರ ತಟಸ್ಥವಾಗಿರಬೇಕು. (6.5–7.5) ನೀರಿನ ರಸಸಾರ 7.5ಕ್ಕಿಂತ ಜಾಸ್ತಿಯಿದ್ದರೆ ಅದನ್ನು ಕ್ಷಾರ ನೀರೆಂದು ಕರೆಯುತ್ತಾರೆ. ಕ್ಷಾರಯುಕ್ತ ನೀರನ್ನು ನೀರಾವರಿಗೆ ಬಳಸುವ ಮುನ್ನ ಸುಧಾರಣೆ ಮಾಡಬೇಕು. ನೀರಾವರಿ ನೀರಲ್ಲಿ ಕರಗಬಲ್ಲ ಕ್ಲೋರೈಡ್ ಹಾಗೂ ಸಲ್ಫೇಟ್ ಲವಣಗಳ ಪ್ರಮಾಣ ಜಾಸ್ತಿಯಿದ್ದರೆ ಅಂತಹ ನೀರನ್ನು ಚೌಳೆಂದು ಕರೆಯುತ್ತಾರೆ. ನೀರಿನ ಚೌಳಿನಂಶವನ್ನು ವಿದ್ಯುದ್ವಾಹಕತ್ವದ ಮೇಲೆ ನಿರ್ಧರಿಸಲಾಗುತ್ತದೆ. ನೀರಿನ ವಿದ್ಯುದ್ವಾಹಕತ್ವ <750, 750–2250 ಮತ್ತು >2250 ಇದ್ದರೆ ಅಂತಹ ನೀರನ್ನು ಕ್ರಮವಾಗಿ ನೀರಾವರಿಗೆ ಸುರಕ್ಷ, ಮಧ್ಯಮ ಸುರಕ್ಷ ಹಾಗೂ ಬಳಕೆಗೆ ಯೋಗ್ಯವಲ್ಲದ ನೀರೆಂದು ವಿಂಗಡಿಸಲಾಗುತ್ತದೆ.

ನೀರಾವರಿ ನೀರಿನ ಸೋಡಿಯಂ ಹಿಡಿದಿಟ್ಟುಕೊಳ್ಳುವ ಅನುಪಾತವನ್ನು ನೀರಲ್ಲಿರುವ ಕ್ಯಾಲ್ಸಿಯಂ, ಮೆಗ್ನೀಷಿಯಂ ಹಾಗೂ ಸೋಡಿಯಂನ ಅಂಶಗಳ ಪ್ರಮಾಣದ ಮೇಲೆ ನಿರ್ಧರಿಸಲಾಗುತ್ತದೆ. ನೀರಿನ ಸೋಡಿಯಂ ಹಿಡಿದಿಟ್ಟುಕೊಳ್ಳುವ ಅನುಪಾತವು, <10, 10–18, 18–26 ಹಾಗೂ >26 ಇದ್ದರೆ ಅಂತಹ ನೀರನ್ನು ಕ್ರಮವಾಗಿ ನೀರಾವರಿಗೆ ಸುರಕ್ಷ, ಮಧ್ಯಮ ಸುರಕ್ಷ ಹಾಗೂ ಯೋಗ್ಯವಲ್ಲದ ನೀರೆಂದು ವರ್ಗೀಕರಿಸಲಾಗುತ್ತದೆ. ನೀರಿನ ಕ್ಷಾರತೆಯನ್ನು ಸೂಚಿಸುವ ಸೋಡಿಯಂ ಕಾರ್ಬೋನೇಟ್ ಉಳಿಕೆಯನ್ನು ನೀರಲ್ಲಿರುವ ಕಾರ್ಬೋನೇಟ್, ಬೈಕಾರ್ಬೋನೇಟ್, ಕಾಲ್ಸಿಯಂ, ಮೆಗ್ನೀಷಿಯಂ ಹಾಗೂ ಸೋಡಿಯಂಗಳ ಪ್ರಮಾಣದ ಮೇಲೆ ನಿರ್ಧರಿಸಲಾಗುತ್ತದೆ.

ನೀರಾವರಿಗೆ ಬಳಸುವ ನೀರಲ್ಲಿ 'ಸೋಡಿಯಂ ಕಾರ್ಬೋನೇಟ್ 'ಉಳಿಕೆಯು <1.25, 1.25–2.5 ಮತ್ತು >2.5 ಇದ್ದರೆ ಅಂತಹ ನೀರು ನೀರಾವರಿಗೆ ಕ್ರಮವಾಗಿ, ಸುರಕ್ಷ, ಮಧ್ಯಮ ಸುರಕ್ಷ ಹಾಗೂ ಯೋಗ್ಯವಲ್ಲದ ನೀರೆಂದು ವಿಂಗಡಿಸಲಾಗುತ್ತದೆ. ಈಗಾಗಲೇ ನೀರಾವರಿಯಡಿಯಲ್ಲಿರುವ ಭೂಮಿಗೆ ನೀರುಣಿಸಲು ಬಳಸುವ ನೀರಲ್ಲಿ ಕ್ಯಾಲ್ಸಿಯಂಗಿಂತ, ಮೆಗ್ನೀಷಿಯಂನಂಶ ಜಾಸ್ತಿಯಿದ್ದರೆ ಹೆಚ್ಚು ಪ್ರಮಾಣದಲ್ಲಿ ಸೋಡಿಯಂ ನೀರಾವರಿಯಡಿಯಲ್ಲಿರುವ ಮಣ್ಣಿನ ಮೇಲೆ ಅಂಟಿಕೊಳ್ಳುವುದರಿಂದ ಮಣ್ಣಿನ ಕಣ ಜೋಡಣೆ ಹಾಳಾಗಿ ಹೋಗುತ್ತದೆ.

ನೀರಲ್ಲಿ ಮೆಗ್ನೀಷಿಯಂ/ಕ್ಯಾಲ್ಸಿಯಂನ ಅನುಪಾತ <1.5, 1.5–3.0 ಮತ್ತು >3.0 ಇದ್ದರೆ ಅಂತಹ ನೀರು ನೀರಾವರಿಗೆ ಕ್ರಮವಾಗಿ ಸುರಕ್ಷ, ಮಧ್ಯಮ ಸುರಕ್ಷ, ಯೋಗ್ಯವಲ್ಲದ ನೀರೆಂದು ಕರೆಯುತ್ತಾರೆ. ಆದುದರಿಂದಲೇ ಕ್ಯಾಲ್ಸಿಯಂನ ಅಂಶ ಜಾಸ್ತಿಯಿರುವ ಗಡಸು ನೀರಿನಿಂದ ಮಣ್ಣು ಮೆದುವಾದಂತೆ, ಸೋಡಿಯಂ ಅಂಶ ಜಾಸ್ತಿಯಿರುವ ನೀರಿನಿಂದ ಮಣ್ಣು ಗಡುಸಾಗುತ್ತದೆ. ಚೌಳು ಅಂಶವಿರುವ ಶುಷ್ಕ ಪ್ರದೇಶಗಳಲ್ಲಿ ನೀರಾವರಿಗೆ ಬಳಸುವ ನೀರಲ್ಲಿ ಬೋರಾನ್ ಹಾಗೂ ಫ್ಲೋರಿನ್ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದು ಉತ್ತಮ.

ನೀರಲ್ಲಿ ಬೋರಾನ್ ಹಾಗೂ ಫ್ಲೋರಿನ್ ಅಂಶಗಳು ಕ್ರಮವಾಗಿ <2 ಮತ್ತು <10 ಮಿ.ಗ್ರಾಂ/ಲೀ. ಇರಬೇಕು. ನೀರಾವರಿ ನೀರಲ್ಲಿ ಫ್ಲೋರಿನ್ ಅಂಶ 10 ಮಿ.ಗ್ರಾಂ/ಲೀ.ಗಿಂತ ಜಾಸ್ತಿಯಿದ್ದರೆ ಮಣ್ಣು ಹಾಗೂ ಬೆಳೆ ಎರಡರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದಿಲ್ಲವೆಂಬುದೇನೋ ನಿಜ. ಆದರೆ ಇಂತಹ ನೀರನ್ನು ಉಪಯೋಗಿಸಿ ಬೆಳೆದ ಮೇವನ್ನು ತಿನ್ನುವ ಜಾನುವಾರುಗಳು ತೊಂದರೆಗೀಡಾಗುತ್ತವೆ. ನೀರಲ್ಲಿರುವ ಸಾವಯವ ಅಂಶವನ್ನು ಶಿಥಿಲಗೊಳಿಸಲು ಸೂಕ್ಷ್ಮಜೀವಿಗಳಿಗೆ ಹಾಗೂ ರಾಸಾಯನಿಕ ವಸ್ತುಗಳಿಗೆ ಬೇಕಾಗುವ ಆಮ್ಲಜನಕದ ಪ್ರಮಾಣವನ್ನು ಕ್ರಮವಾಗಿ ಜೈವಿಕ ಹಾಗೂ ರಾಸಾಯನಿಕ ಆಮ್ಲಜನಕದ ಬೇಡಿಕೆ ಎಂದು ಹೇಳುತ್ತಾರೆ.

ನೀರಿನಲ್ಲಿ ಸಾವಯವ ಅಂಶ ಜಾಸ್ತಿಯಿದ್ದರೆ, ಜೈವಿಕ ಹಾಗೂ ರಾಸಾಯನಿಕ ಆಮ್ಲಜನಕದ ಬೇಡಿಕೆ ಜಾಸ್ತಿಯಾಗಿ ನೀರು ಹೆಚ್ಚು–ಕಡಿಮೆ



ಆಮ್ಲಜನಕರಹಿತವಾಗುತ್ತದೆ. ಅಂತಹ ನೀರನ್ನು ಭೂಮಿ ಗುಣಿಸಿದಾಗ ಮಣ್ಣು ಅನಾರೋಗ್ಯಕ್ಕೆ ತುತ್ತಾಗುತ್ತದೆ. ಆದುದರಿಂದ ನೀರಾವರಿಗೆ ಬಳಸುವ ಕೈಗಾರಿಕೆಗಳ ತ್ಯಾಜ್ಯ ನೀರಿನಲ್ಲಿ ಜೈವಿಕ ಹಾಗೂ ರಾಸಾಯನಿಕ ಆಮ್ಲಜನಕದ ಬೇಡಿಕೆಯ ಗರಿಷ್ಠ ಪ್ರಮಾಣ ಕ್ರಮವಾಗಿ 200–250 ಹಾಗೂ 500 ಮಿ.ಗ್ರಾ/ಲೀ. ಇರಬೇಕು. ಮರಳಿನ ಅಂಶ ಜಾಸ್ತಿಯಿರುವ ಮಣ್ಣುಗಳಿಗಿಂತ ಜೇಡಿಯ ಅಂಶ ಜಾಸ್ತಿಯಿರುವ ಮಣ್ಣುಗಳಲ್ಲಿ ಚೌಳು ನೀರಿನಿಂದಾಗುವ ದುಷ್ಪರಿಣಾಮಗಳು ಜಾಸ್ತಿ.ಕಾರಣ ಮರಳಿನಂಶ ಜಾಸ್ತಿಯಿರುವ ಮಣ್ಣುಗಳಲ್ಲೂ ನೀರು ಬಸಿಯುವಿಕೆ ಪ್ರಮಾಣ ಜಾಸ್ತಿಯಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಜೇಡಿಮಣ್ಣಿನಲ್ಲಿರುವ ನೀರು ಬಸಿಯುವಿಕೆಯ ಪ್ರಮಾಣ ಕಡಿಮೆಯಿರುತ್ತದೆ.

ನೀರಾವರಿಗೆ ಅಸುರಕ್ಷವಾದ ನೀರನ್ನು ಚೌಳು ಹಾಗೂ ಸೋಡಿಯಂಗಳೆರಡಕ್ಕೂ ಸಹಿಷ್ಣುತೆ ಹೊಂದಿದ ಬೆಳೆಗಳಿಗೆ ಮಾತ್ರ ಬಳಸಬಹುದು. ನೀರಲ್ಲಿ ಚೌಳಿನಂಶ ಮಧ್ಯಮ ಪ್ರಮಾಣದಲ್ಲಿದ್ದರೆ ಅಂತಹ ನೀರನ್ನು ಉತ್ತಮ ಗುಣಮಟ್ಟದ ನೀರಿನೊಂದಿಗೆ ಬೆರೆಸಿ ನೀರಾವರಿ ಮಾಡಬೇಕು ಮತ್ತು ಬಿತ್ತನೆಗೆ ಹೆಚ್ಚಿಗೆ ಪ್ರಮಾಣದಲ್ಲಿ ಬೀಜವನ್ನು ಬಳಸಬೇಕು. ನೀರಿನಲ್ಲಿ ಸೋಡಿಯಂನ ಅಂಶ ಜಾಸ್ತಿಯಿದ್ದರೆ ಅಂತಹ ನೀರನ್ನು ನೀರಾವರಿಗೆ ಬಳಸುವ ಮೊದಲು ನೀರಿಗೆ ಜಿಪ್ಸಂ ಬೆರೆಸಬೇಕು ಅಥವಾ ನೀರುಣಿಸಬೇಕಾಗಿರುವ ಭೂಮಿಗೆ ಜಿಪ್ಸಂ ಮತ್ತು ಸಾವಯವ ಗೊಬ್ಬರಗಳನ್ನು ಸೇರಿಸಿ ನೀರಾವರಿ ಮಾಡಬೇಕು.

ಜೇಡಿಮಣ್ಣಿನಲ್ಲಿ ನೀರಾವರಿ ಅನಿವಾರ್ಯವಾದಾಗ ರಾಸಾಯನಿಕ ಹಾಗೂ ಸಾವಯವ ಸುಧಾರಣೆಗಳ ಬಳಕೆಯಿಂದ ಮತ್ತು ಬಸಿಗಾಲುವೆ ನೀರಾವರಿಯಿಂದಾಗಬಹುದಾದ ದುಷ್ಪರಿಣಾಮಗಳನ್ನು ಕಡಿಮೆ ಮಾಡಬಹುದು. ಮಣ್ಣು ಹಾಗೂ ನೀರು ಪರೀಕ್ಷೆಯ ಆಧಾರದ ಮೇಲೆ ನೀರಾವರಿಯ ಸೂಕ್ತತೆಯನ್ನು ನಿರ್ಧರಿಸಬಹುದು. ಜೊತೆಗೆ ರಾಸಾಯನಿಕ ಸುಧಾರಕಗಳ ಬಳಕೆಯ ಪ್ರಮಾಣವನ್ನು ನಿರ್ಧರಿಸಬಹುದು. ಹೆಚ್ಚಿನ ಸುಸ್ಥಿರ ಮಣ್ಣಿನ ಉತ್ಪಾದಕತೆಗಾಗಿ ರೈತರು ನೀರಾವರಿ ಮಾಡುವುದಕ್ಕಿಂತ ಮೊದಲು ನೀರನ್ನು ಮೂರು ವರ್ಷ ಗಳಿಗೊಮ್ಮೆ ಪರೀಕ್ಷೆ ಮಾಡಿಸುವುದು ಉತ್ತಮ.

# ರೇಷ್ಮೆಕೃಷಿಯಲ್ಲಿ ಕೀಟನಾಶಕದಿಂದಾಗುವ ಸಮಸ್ಯೆಗಳು ಹಾಗೂ ಹತೋಟಿ ಕ್ರಮಗಳು

ಲೇಖಕರು: ಡಾ. ಜ್ಯೋತಿ ಎನ್. ಬಿ. ಮತ್ತು ಡಾ. ವಿ. ಜಿ. ಮರಿಬಾಶೆಟ್ಟಿ, ವಿಜ್ಞಾನಿಗಳು
ರೇಷ್ಮೆ ಕೃಷಿ ವಿಭಾಗ, ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ, ಬೆಂಗಳೂರು– 560 109. ಮೊ : 9901066282

ರೇಷ್ಮೆ ಕೃಷಿಯಲ್ಲಿ ಇತ್ತೀಚೆಗೆ ಕೀಟನಾಶಕಗಳು, ಕಳೆನಾಶಕಗಳು ಮತ್ತು ಎಲೆ ಸಿಂಪರಕಗಳ ಯಥೇಚ್ಛ ಬಳಕೆಯಿಂದ, ಹಿಪ್ಪುನೇರಳೆ ತೋಟದ ಮಣ್ಣು ಮತ್ತು ಸೊಪ್ಪು ಕಲುಷಿತಗೊಳ್ಳುತ್ತಿದ್ದು, ಕೀಟದ ಜಾತಿಗೆ ಸೇರಿದ ಸೂಕ್ಷ್ಮ ಪ್ರಾಣಿಯಾದ ರೇಷ್ಮೆಹುಳುವು ಈ ರೀತಿಯ ಮಲಿನ ವಸ್ತುಗಳ ಸೇವನೆಯಿಂದಾಗಿ ಬೇರೆ–ಬೇರೆ ಲಕ್ಷಣಗಳನ್ನು ತೋರ್ಪಡಿಸುತ್ತಾ ಸಾವನ್ನಪ್ಪುತ್ತಿದ್ದು, ರೇಷ್ಮೆ ಬೆಳೆಗಾರರು ಹುಳುಗಳ ರೋಗಕ್ಕಿಂತಲೂ ಈ ತರಹದ ಸಮಸ್ಯೆಯಿಂದ ಹೆಚ್ಚಾಗಿ ಬೆಳೆ ಕಳೆದು ಕೊಳ್ಳುತ್ತಿದ್ದಾರೆ. ಸ್ಥಳೀಯ ಪತ್ರಿಕೆಗಳಲ್ಲಿಯೂ ಇಂತಹ ಘಟನೆಗಳ ಬಗ್ಗೆ ವರದಿಯಾಗುತ್ತಿದ್ದು, ವಿಜ್ಞಾನಿಗಳು ಇದರ ಬಗ್ಗೆ ಗಮನ ಹರಿಸಬೇಕೆಂದು ಪ್ರಕಟಿಸಲಾಗುತ್ತಿದೆ. ಕೀಟನಾಶಕ/ಕಳೆನಾಶಕಗಳಿಂದಾಗಿ ರೇಷ್ಮೆ ಉದ್ಯಮಕ್ಕೆ ಆಗುತ್ತಿರುವ ಸಮಸ್ಯೆಯ ಬಗ್ಗೆ ಸಂಸ್ಥೆಯಲ್ಲಿ ಇದುವರೆಗೆ ನಡೆಸಿದ ಅಧ್ಯಯನದ ಫಲಿತಾಂಶದ ವಿವರ ಮತ್ತು ಹಾಲಿ ನಡೆಯುತ್ತಿರುವ ವಿಷಯವನ್ನು ರೇಷ್ಮೆ ಕೃಷಿ ಭಾಗೀದಾರರ ಮಾಹಿತಿಗಾಗಿ ಈ ಲೇಖನದಲ್ಲಿ ನೀಡಲಾಗಿದೆ. ಕೀಟನಾಶಕವು ರೇಷ್ಮೆ ಚಟುವಟಿಕೆಗಳಲ್ಲಿ ಪ್ರವೇಶಿಸುವ ವಿವಿಧ ಮಾರ್ಗಗಳು ಹಾಗೂ ಇದರಿಂದ ಹಿಪ್ಪುನೇರಳೆ ಗಿಡ ಮತ್ತು ಹುಳುಗಳ ಮೇಲಾಗುವ ದುಷ್ಪರಿಣಾಮಗಳ ಬಗೆಗಿನ ಮಾಹಿತಿಯು ರೇಷ್ಮೆ ಭಾಗೀದಾರರಲ್ಲಿ ಹೆಚ್ಚು ಪ್ರಚಾರಗೊಳ್ಳಲೆಂದು ವಿವಿಧ ನಿಯತಕಾಲಿಕೆಗಳಲ್ಲಿ ಆಗಿಂದಾಗ್ಗೆ ಶಿಫಾರಸ್ಸುಗಳನ್ನು ಪ್ರಕಟಿಸಲಾಗುತ್ತಿದೆ.

ಕರ್ನಾಟಕ ರಾಜ್ಯ ರೇಷ್ಮೆ ಇಲಾಖಾ ಸಿಬ್ಬಂದಿ ಮತ್ತು ರಾಜ್ಯದ ವಿವಿಧ ಜಿಲ್ಲೆಗಳ ರೈತರಿಂದ ಬಂದ ದೂರಿನನ್ವಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ನವದೆಹಲಿ ಮತ್ತು ಕರ್ನಾಟಕ ಸರ್ಕಾರ, ರೇಷ್ಮೆ ಇಲಾಖೆಯಿಂದ ಅನುದಾನಿತ ಯೋಜನೆಗಳಡಿ 2015–16 ರಿಂದ ಮೊದಲ್ಗೊಂಡು ಇದರ ಬಗ್ಗೆ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರದಲ್ಲಿ ಅಧ್ಯಯನ ನಡೆಯುತ್ತಿದೆ. ಬೆಳೆ ಕಳೆದುಕೊಂಡ ರೈತರ ತೋಟಗಳಿಗೆ ವಿಜ್ಞಾನಿಗಳು ಭೇಟಿ ನೀಡಿ, ಸಮೀಕ್ಷೆ ನಡೆಸಿ, ರೈತರಿಂದ ಹಿಪ್ಪುನೇರಳೆ ತೋಟದ ಮಣ್ಣು, ಸೊಪ್ಪು ಮತ್ತು ಹುಳುವಿನ ಮಾದರಿಗಳನ್ನು ಸಂಗ್ರಹಿಸಿ, ಪರೀಕ್ಷೆ ಮೂಲಕ ಕೂಲಂಕುಷವಾಗಿ ವಿಶ್ಲೇಷಿಸಿ, ಅಧ್ಯಯನ ನಡೆಸಲಾಯಿತು (ಕೋಷ್ಟಕ–1).

### ಕೋಷ್ಟಕ–1: ರೇಷ್ಮೆ ಹುಳುಗಳಲ್ಲಿ ಕಂಡುಬರುವ ವಿವಿಧ ವಿಲಕ್ಷಣಗಳ ಬಗ್ಗೆ ಸಂಸ್ಥೆಯಲ್ಲಿ ಅಧ್ಯಯನ ನಡೆಸಿ ಹೊರಬಂದ ವೈಜ್ಞಾನಿಕ ವಿಶ್ಲೇಷಣಾ ಫಲಿತಾಂಶದ ಮುಖ್ಯ ವಿವರ

- ಕೀಟನಾಶಕವು ರೇಷ್ಮೆ ಕೃಷಿ ವಾತಾವರಣದಲ್ಲಿ ಮೂರು ವಿಧವಾಗಿ ಹರಡುತ್ತದೆ: 1. ಮಣ್ಣಿನಿಂದ ಹಿಪ್ಪುನೇರಳೆ ಗಿಡದ ಬೇರಿನ ಮುಖಾಂತರ ಸೊಪ್ಪಿಗೆ ವರ್ಗಾವಣೆ. 2. ಗಾಳಿ ಮುಖಾಂತರ ಸೊಪ್ಪಿನ ಮೇಲೆ ಸಂಪರ್ಕ. 3. ಹುಳು ಸಾಕಾಣಿಕಾ ಸಮಯದಲ್ಲಿ ರಾಸಾಯನಿಕದ ವಾಸನೆ ಗಾಳಿಯಲ್ಲಿ ಹರಡುವಿಕೆ.
- ತರಕಾರಿ, ಹೂವು, ಹಣ್ಣು ಮತ್ತು ಇತರೆ ಯಾವುದೇ ಬೆಳೆಗೆ ಸಿಂಪಡಿಸಿದ ಕೀಟನಾಶಕವು ಮಣ್ಣಿನಲ್ಲಿ ಬಿದ್ದು, ಆ ಜಾಗದಲ್ಲಿ ಹಿಪ್ಪುನೇರಳೆ ನಾಟಿ ಮಾಡಿದಾಗ ಮಣ್ಣಿನಲ್ಲಿಯ ಕೀಟನಾಶಕದ ಶೇಷಾಂಶವು ಬೇರು ಹಾಗೂ ಕಾಂಡದ ಮುಖಾಂತರ ಸೊಪ್ಪಿಗೆ ವರ್ಗಾವಣೆಗೊಂಡಿರುತ್ತದೆ ಮತ್ತು ಸೊಪ್ಪಿನಲ್ಲಿರುವ ಕೀಟನಾಶಕದ ಪ್ರಮಾಣದ ಆಧಾರದ ಮೇಲೆ ಇಂತಹ ಕಲುಷಿತ ಸೊಪ್ಪನ್ನು ತಿಂದ ರೇಷ್ಮೆ ಹುಳುಗಳು ಬೆಳವಣಿಗೆಯ ವಿವಿಧ ಹಂತಗಳಲ್ಲಿ, ಬೇರೆ ಬೇರೆ ಲಕ್ಷಣಗಳಿಂದ ಸಾವನ್ನಪ್ಪುತ್ತವೆ.
- ಮಣ್ಣಿನಲ್ಲಿರುವ ಕೀಟನಾಶಕದ ಪ್ರಮಾಣದ ಆಧಾರದ ಮೇಲೆ ಶೇ. 30 ರಿಂದ 100ರಷ್ಟು ರೇಷ್ಮೆ ಬೆಳೆ ಹಾಳಾಗಲು ಕಾರಣವಾಗುತ್ತದೆ.
- ಹೊಸ ಹಿಪ್ಪುನೇರಳೆ ತೋಟದ ಪ್ರಾರಂಭದಲ್ಲಿ ರೇಷ್ಮೆ ಬೆಳೆಹಾನಿಯು ಶೇ.100ರಷ್ಟಿದ್ದರೆ ಕಾಲಕ್ರಮೇಣ ಅದು ಕಡಿಮೆಯಾಗುತ್ತಾ ಬರುತ್ತದೆ. ಮಣ್ಣಿನಲ್ಲಿರುವ ಕೀಟನಾಶಕದ ಪರಿಣಾಮ ಹುಳುವಿನ ಮೇಲೆ ಮೊದಲ ಸೊಪ್ಪಿನ ಕೊಯ್ಲಿಂದ ಪ್ರಾರಂಭಗೊಂಡು ಸುಮಾರು ಮೂರು ವರ್ಷಗಳವರೆಗೆ ರೈತರು ವಿವಿಧ ಹಂತದಲ್ಲಿ ರೇಷ್ಮೆ ಬೆಳೆಯನ್ನು ಕಳೆದುಕೊಂಡಿರುವುದನ್ನು ಅಧ್ಯಯನದಿಂದ ದಾಖಲಿಸಲಾಗಿದೆ.
- ರೇಷ್ಮೆ ಬೆಳೆ ಹಾನಿಯ ಪ್ರಮಾಣ ಹಿಂದಿನ ಕೃಷಿ ಬೆಳೆಗೆ ಉಪಯೋಗಿಸಿದ ಕೀಟನಾಶಕದ ಸಾಂದ್ರತೆ (concentration), ಪ್ರಮಾಣ ಮತ್ತು ಅದನ್ನು ಉಪಯೋಗಿಸಿದ ಅವಧಿಯ ಮೇಲೆ ಅವಲಂಬಿಸಿರುತ್ತದೆ.
- ವಾಣಿಜ್ಯಕವಾಗಿ ಬಳಸುವ ಅರವತ್ತಕ್ಕೂ ಹೆಚ್ಚು ಕೀಟನಾಶಕ/ಕಳೆನಾಶಕಗಳನ್ನು ಮಣ್ಣಿಗೆ ಸಿಂಪಡಿಸಿ, ಮಣ್ಣಿನಲ್ಲಿ ಅವುಗಳ ಜೀವಿತಾವಧಿ ಮತ್ತು ರೇಷ್ಮೆಹುಳುವಿನ ಮೇಲಾಗುವ ದುಷ್ಪರಿಣಾಮದ ಬಗ್ಗೆ ಅಧ್ಯಯನ ನಡೆಸಿದಾಗ ಕೀಟನಾಶಕಗಳಾದ ಕ್ಲೋರ್ಯಾಂತ್ರಾನಿಲಿಪ್ರೋಲ್ (Chloranthraniliprole) ಮತ್ತು ಥೈಯಾಮಿಥೋಕ್ಸಾಮ್ (Thiamethoxam) ಕೀಟನಾಶಕಗಳು ಮಣ್ಣಿನಲ್ಲಿ ಸುಮಾರು ಮೂರು ವರ್ಷಗಳಿಗಿಂತ ಅಧಿಕ ಅವಧಿಯವರೆಗೆ ಮತ್ತು ಇಮಿಡಕ್ಲೋರೋಪಿಡ್‌ನ (Imidachlorpid) ಪ್ರಭಾವವು ಸುಮಾರು ಆರು

ತಿಂಗಳವರೆಗೆ ಅಲ್ಲದೇ ಅಧ್ಯಯನಕ್ಕೆ ಒಳಪಡಿಸಿದ ಸುಮಾರು ಅರವತ್ತು ವಿವಿಧ ಕೀಟನಾಶಕಗಳಲ್ಲಿ ಶೇ. 80ರಷ್ಟು ಕೀಟನಾಶಕಗಳ ಪ್ರಭಾವವು ಮಣ್ಣಿನಲ್ಲಿ ಸುಮಾರು ಮೂರು ತಿಂಗಳವರೆಗೆ ಸಕ್ರಿಯವಾಗಿರುವುದು ಕಂಡುಬಂದಿರುತ್ತದೆ.

- ಹುಳುಗಳು ಸಾಕಾಣಿಕಾ ಹಂತದಲ್ಲಿ ಸಾವನ್ನಪ್ಪುವುದು ಅಥವಾ ಹಣ್ಣಾಗಿ ಸಾವನ್ನಪ್ಪುವುದು ಅಥವಾ ಕಳಪೆ ಗೂಡು ಕಟ್ಟಿ ಸಾವನ್ನಪ್ಪುವುದು ಎಲ್ಲವೂ ಮಣ್ಣಿನಲ್ಲಿರುವ ಕೀಟನಾಶಕದ ಸಕ್ರಿಯ ಸಾಂದ್ರತೆಯ ಮೇಲೆ ಅವಲಂಭಿತವಾಗಿರುತ್ತದೆ. ಕ್ಲೋರ್ಯಾಂತ್ರಾನಿಲಿಪ್ರೋಲ್ ಮತ್ತು ಥೈಯಾಮಿಥೋಕ್ಸ್ಯಾಮ್‌ನಂತಹ ಕೀಟನಾಶಕಗಳು ಅತ್ಯಂತ ಕನಿಷ್ಠ ಪ್ರಮಾಣದಲ್ಲಿ (PPB level) ಇದ್ದರೂ ಕೂಡ ಹುಳುಗಳು ಸಾವನ್ನಪ್ಪುತ್ತವೆ.
- ಎಲ್ಲಾ ಕೀಟನಾಶಕಗಳ ವಿಷದಿಂದ ಹುಳುವಿನ ಸಾಕಾಣಿಕಾ ಹಂತದಲ್ಲಿಯೇ ವಾಂತಿ/ಕೊಕ್ಕೆ ಆಕಾರವಾಗಿ ಸಾವನ್ನಪ್ಪುವುದು/ ಗುದನಾಳ ಹೊರ ಬರುವುದು/ ವಿಪರೀತ ತಲೆಯಲ್ಲಾಡಿಸುವುದು/ ಸರ ಹಿಕ್ಕೆ/ ಹಿಕ್ಕೆ ಗುದನಾಳದಲ್ಲಿ ಗಟ್ಟಿಯಾಗುವುದು/ ನಿಶ್ಯಕ್ತಿ/ ಸೊಪ್ಪು ತಿನ್ನಲು ಇಚ್ಛಿಸದಿರುವುದು ಇಂತಹ ಬೇರೆ ಬೇರೆ ಲಕ್ಷಣಗಳು ಕಂಡುಬಂದರೆ, ಕ್ಲೋರ್ಯಾಂತ್ರಾನಿಲಿಪ್ರೋಲ್ ಕೀಟನಾಶಕ ಮಾತ್ರ ಹುಳುಗಳು ಹಣ್ಣಾದರೂ ಗೂಡು ಕಟ್ಟದೆ ದೇಹ ಊದಿಕೊಳ್ಳುವುದು ಅಥವಾ ಕಳಪೆಗೂಡು ಕಟ್ಟುವಂತೆ ಮಾಡುತ್ತದೆ.
- ಮೆಟ್ರಿಬ್ಯುಜಿನ್‌ನಂತಹ ಕಳೆನಾಶಕವನ್ನು ಹಿಪ್ಪುನೇರಳೆ ಗಿಡವು ಮಣ್ಣಿನಿಂದ ಹೀರಿಕೊಳ್ಳುವುದರಿಂದ ಕಳೆಯ ಜೊತೆಗೆ ಗಿಡವೂ ಹಾನಿಗೊಳಗಾಗಿ, ಕ್ರಮೇಣವಾಗಿ ಸಾವನ್ನಪ್ಪುತ್ತದೆ.
- ಕೆಲವೊಮ್ಮೆ ಕೀಟನಾಶಕದಿಂದ ಮಲಿನಗೊಂಡ ಸೊಪ್ಪನ್ನು ತಿಂದ ಚಾಕಿ ಹುಳುಗಳು ಸಾಯದೇ ಇದ್ದರೂ ಅದೇ ಸೊಪ್ಪನ್ನು ತಿಂದ ಐದನೇ ಹಂತದ ಹುಳುಗಳು ಸಾವನ್ನಪ್ಪುತ್ತವೆ (ಐದನೇ ಹಂತದಲ್ಲಿ ಅಧಿಕ ಪ್ರಮಾಣದ ಸೊಪ್ಪಿನ ಸೇವನೆಯಿಂದ). ಆದ್ದರಿಂದ, ರೈತರು ತಮ್ಮ ತೋಟದ ಸೊಪ್ಪು ವಿಷಮುಕ್ತವೆ ಎಂದು ತಿಳಿಯಬೇಕಾದರೆ ಅದನ್ನು ಐದನೇ ಹಂತದ ಅಂದಾಜು ನೂರು ಹುಳುಗಳಿಗೆ ನೀಡಿ ಬಾಹ್ಯ ಲಕ್ಷಣದ ಆಧಾರದ ಮೇಲೆ ಪರೀಕ್ಷಿಸಿಕೊಳ್ಳಬಹುದು.
- ಇತ್ತೀಚಿಗೆ ಕ್ಷೇತ್ರಮಟ್ಟದಲ್ಲಿ 5ನೇ ಹಂತದಲ್ಲಿ ಹುಳುಗಳ ಜೀವಿತಾವಧಿ ವಿಸ್ತರಣೆಗೊಂಡು 12–15 ದಿನವಾದರೂ ಸೊಪ್ಪು ತಿನ್ನುತ್ತಾ ಉಳಿದು ಹಣ್ಣಾಗದಿರುವುದು ವರದಿಯಾಗುತ್ತಿದ್ದು, ಪರೀಕ್ಷೆಗೆ ಒಳಪಡಿಸಿದ ಸದರಿ ಮಾದರಿಗಳಲ್ಲಿ ಕೀಟನಾಶಕವು ಅತ್ಯಂತ ಕಡಿಮೆ ಪ್ರಮಾಣದಲ್ಲಿರುವುದು ಕಂಡುಬಂದಿದ್ದು, ಹೆಚ್ಚಿನ ಅಧ್ಯಯನ ಕೈಗೊಳ್ಳಲಾಗುತ್ತಿದೆ.

ರೇಷ್ಮೆಕೃಷಿಯಲ್ಲಿ ಕೀಟನಾಶಕ/ಕಳೆನಾಶಕಗಳು ಹಿಪ್ಪುನೇರಳೆ ಸೊಪ್ಪು ಮತ್ತು ಮಣ್ಣಿನೊಂದಿಗೆ ಸಂಪರ್ಕಕ್ಕೆ ಬರಬಹುದಾದ ವಿವಿಧ ಮಾರ್ಗಗಳ ಸಾಧ್ಯತೆಗಳನ್ನು ಅರಿತುಕೊಳ್ಳಲಾಗಿದೆ. ಇದಲ್ಲದೆ ಇತರೆ ಕೃಷಿ/ತೋಟಗಾರಿಕೆ ಬೆಳೆಗಳಿಗೆ ಶಿಫಾರಸ್ಸಾದ ವಿವಿಧ ಕೀಟನಾಶಕ/ ಕಳೆನಾಶಕ/ ಜೈವಿಕ ಕೀಟನಾಶಕದಂತಹ ರಾಸಾಯನಿಕಗಳನ್ನೊಳಗೊಂಡ ವಿವಿಧ ಮಣ್ಣು ಮತ್ತು ಎಲೆ ಸಿಂಪರಕಗಳನ್ನು ರೈತರು ಬಳಸಿದಾಗ, ಹಿಪ್ಪುನೇರಳೆ ತೋಟದ ಮಣ್ಣು ಮತ್ತು ಎಲೆ ಮಲಿನಗೊಂಡು ಇಂತಹ ಸೊಪ್ಪನ್ನು ತಿಂದ ರೇಷ್ಮೆಹುಳುಗಳಲ್ಲಿ ಕಂಡುಬರುವ ವಿವಿಧ ಹೊರ ಲಕ್ಷಣಗಳು ಮತ್ತು ಅವುಗಳ ನಿಯಂತ್ರಣಾ ಕ್ರಮಗಳನ್ನು ಕೋಷ್ಟಕ–2 ರಲ್ಲಿ ನೀಡಲಾಗಿದೆ.

### ಕೋಷ್ಟಕ–2: ರೇಷ್ಮೆ ಹುಳುಗಳಲ್ಲಿ ಕಂಡುಬರುವ ವಿವಿಧ ವಿಲಕ್ಷಣಗಳಿಗೆ ಕಾರಣಗಳು ಮತ್ತು ನಿರ್ವಹಣಾ ಕ್ರಮಗಳು

| ಲಕ್ಷಣ | ಕಾರಣ |
|---|---|
| **ಲಕ್ಷಣ ಗುಂಪು–1:** ಚಾಕಿಯಿಂದ ಮೊದಲ್ಗೊಂಡು ಹುಳುಗಳು ಯಾವುದೇ ಹಂತದಲ್ಲಿ ವಾಂತಿ ಮಾಡಿಕೊಂಡು ನಂತರ ಕೊಕ್ಕೆ ಆಕಾರವಾಗಿ ಸಾವನ್ನಪ್ಪುವುದು/ ಗುದನಾಳ ಹೊರಬರುವುದು/ ವಿಪರೀತ ತಲೆಯಲ್ಲಾಡಿಸುವುದು/ ಸರ ಹಿಕ್ಕೆ/ ಹಿಕ್ಕೆ ದೇಹದಿಂದ ಹೊರಬರಲಾರದೆ ಗುದನಾಳದಲ್ಲಿ ಗಟ್ಟಿಯಾಗುವುದು/ ನಿಶ್ಯಕ್ತಿ/ ಸೊಪ್ಪು ತಿನ್ನಲು ಇಚ್ಛಿಸದಿರುವುದು. (ಚಿತ್ರ–1–4) | ❖ **ಮಣ್ಣಿನಿಂದ ಹಿಪ್ಪುನೇರಳೆ ಗಿಡದ ಬೇರಿನ ಮುಖಾಂತರ ಸೊಪ್ಪಿಗೆ ವರ್ಗಾವಣೆ:** ತರಕಾರಿ, ಹೂವು, ಹಣ್ಣು ಮತ್ತು ಇತರೆ ಯಾವುದೇ ಬೆಳೆಗೆ ಸಿಂಪಡಿಸಿದ ಕೀಟನಾಶಕವು ಮಣ್ಣಿನಲ್ಲಿ ಬಿದ್ದು, ಆ ಜಾಗದಲ್ಲಿ ಹಿಪ್ಪುನೇರಳೆ ನಾಟಿ ಮಾಡಿದಾಗ ಮಣ್ಣಿನಲ್ಲಿಯ ಕೀಟನಾಶಕದ ಶೇಷಾಂಶವು ಕಾಂಡದ ಮುಖಾಂತರ ಸೊಪ್ಪಿಗೆ ಬಂದು ಅಂತಹ ಸೊಪ್ಪನ್ನು ರೇಷ್ಮೆಹುಳು ತಿಂದಾಗ (ಮಣ್ಣಿನಲ್ಲಿ ಕೀಟನಾಶಕದ ಪ್ರಮಾಣ ಹೆಚ್ಚಿದ್ದರೆ) ಈ ರೀತಿಯ ಲಕ್ಷಣ ಕಾಣಬಹುದು.<br>❖ **ಗಾಳಿ ಮುಖಾಂತರ ಸೊಪ್ಪಿನ ಮೇಲೆ ಸಂಪರ್ಕ:** ಹಿಪ್ಪುನೇರಳೆ ತೋಟದ ಪಕ್ಕದ ಬೆಳೆಗಳಿಗೆ ಬೂಮರ್/ಪ್ರೆಷರ್ ಪಂಪ್‌ಗಳಿಂದ ಸಿಂಪಡಿಸಿದ ಕೀಟ ನಾಶಕ / ಕಳೆನಾಶಕದ ತುಂತುರು ಕಣಗಳು ಗಾಳಿಯ ಮೂಲಕ ಪಸರಿಸಿ, ಸೊಪ್ಪಿನ ಮೇಲೆ ನೆಲೆ ನಿಂತಾಗ ಅಂತಹ ಸೊಪ್ಪನ್ನು ತಿಂದ ಹುಳುಗಳು ಮೇಲ್ಕಂಡ ಲಕ್ಷಣಗಳನ್ನು ಹೊಂದಿರುತ್ತವೆ. |

| | |
|---|---|
| **ಲಕ್ಷಣ ಗುಂಪು 2:** 5ನೇ ಹಂತದವರೆಗೂ ಆರೋಗ್ಯವಾಗಿದ್ದು, ಹಣ್ಣಾದ ಹುಳುಗಳು ಹಸಿರು ಬಣ್ಣದ ರಸವನ್ನು ವಾಂತಿ ಮಾಡಿಕೊಂಡು, ಗುದನಾಳ ಹೊರ ಬಂದು, ಹುಳು ಮೋಟಾಗಿ ನಂತರ ಸಾವನ್ನಪ್ಪುವುದು. (ಚಿತ್ರ–4) | ❖ **ಕೀಟನಾಶಕದ ದುರ್ಬಳಕೆ:** ಹಿಪ್ಪುನೇರಳೆಗೆ ತಗಲುವ ಕೀಟಗಳ ನಿಯಂತ್ರಣಕ್ಕೆ ಬಳಸುವ ಕೀಟನಾಶಕದ ಪ್ರಮಾಣ ಜಾಸ್ತಿಯಾದರೆ ಅಥವಾ ನಿಗದಿತ ಅವಧಿಗಿಂತ (Safety Period) ಮೊದಲೇ ಸೊಪ್ಪನ್ನು ರೇಷ್ಮೆ ಹುಳುಗಳಿಗೆ ನೀಡುವುದರಿಂದ.<br>❖ ಹಿಪ್ಪುನೇರಳೆ ತೋಟದಲ್ಲಿ ಬಳಸಿದ ಕಳೆನಾಶಕಗಳು ಸೊಪ್ಪಿಗೆ ಸೋಂಕಿದಾಗ ಅಂತಹ ಸೊಪ್ಪನ್ನು ತಿಂದು ಆರೋಗ್ಯವಂತ ಹುಳುಗಳು ಸಾವನ್ನಪ್ಪುತ್ತವೆ. |

**ನಿರ್ವಹಣೆ :**

ಮಣ್ಣಿನಲ್ಲಿ ಕೀಟನಾಶಕದ ಪರಿಣಾಮ ಕಡಿಮೆ ಮಾಡುವುದು

❖ **ಹಿಪ್ಪುನೇರಳೆ ತೋಟದಲ್ಲಿ ಸಸ್ಯಾಧಾರಿತ ನಿರ್ವಹಣಾ ಕ್ರಮ (Phytoremedial measure):** ಇತರೆ ಬೆಳೆ ಬೆಳೆದ ತೋಟಗಳಲ್ಲಿ ನೇರವಾಗಿ ಹಿಪ್ಪುನೇರಳೆ ನಾಟಿ ಮಾಡದೇ 2–3 ಬಾರಿ ಮುಸುಕಿನ ಜೋಳ ಅಥವಾ ಅಪ್ಸೆಣಬು ಬೆಳೆದು ಮಣ್ಣಿನಲ್ಲಿನ ರಾಸಾಯನಿಕದ ಶೇಷಾಂಶ ಹೀರಲು ಅವಕಾಶ ಮಾಡಬೇಕು ಹಾಗೂ ಇದನ್ನು ಜಾನುವಾರುಗಳಿಗೆ ಮೇವು/ಗೊಬ್ಬರವಾಗಿ ಬಳಸಬಾರದು.

❖ **ಹಿಪ್ಪುನೇರಳೆ ಗಿಡದ ಸುತ್ತಲೂ ಮಣ್ಣು ಬದಲಾಯಿಸುವಿಕೆ (Soil replenishment):** ಗಿಡದ ಬುಡದ ಸುತ್ತಲೂ (root zone) ಟ್ರೆಂಚ್ ತೆಗೆದು ಆ ಗುಂಡಿಗೆ ಸಾವಯವ ಗೊಬ್ಬರ, ಕೊಟ್ಟಿಗೆ ಗೊಬ್ಬರ ಮತ್ತು ಲಭ್ಯವಿರುವ ಯಾವುದೇ ಹಸಿರೆಲೆಯನ್ನು ತುಂಬಿಸಬೇಕು ಹಾಗೂ ಮಣ್ಣು ಸರಿ ಹೋಗುವವರೆಗೂ ಉಳುಮೆ ಮಾಡಬಾರದು. ತೋಟಕ್ಕೆ ಸಾವಯವ ಗೊಬ್ಬರ ಮತ್ತು ಕೊಟ್ಟಿಗೆ ಗೊಬ್ಬರ ಹೆಚ್ಚಾಗಿ ಬಳಸುವುದರಿಂದ ಮಣ್ಣಿನಲ್ಲಿರುವ ಕೀಟನಾಶಕದ ಹೀರುವಿಕೆ (adsorption) ಹೆಚ್ಚಾಗಿ, ಮಣ್ಣಿನಲ್ಲಿ ಅದರ ಪರಿಣಾಮ ಕಡಿಮೆಗೊಳ್ಳುವುದು.

❖ **ಮಣ್ಣಿನಲ್ಲಿ ಬೇರಿನ ಹಂತದಿಂದ ಇಂಗುವಿಕೆ (Leaching):** ಇಂತಹ ತೋಟಗಳಿಗೆ ಹೆಚ್ಚು ನೀರನ್ನು ಕಟ್ಟಿ ನಿಲ್ಲಿಸಿ, ವಿಷಯುಕ್ತ ರಾಸಾಯನಿಕಗಳು ಮಣ್ಣಿನಲ್ಲಿ ಬೇರಿನ ಹಂತಕ್ಕಿಂತ ಕೆಳಗೆ ಬೇಗ ಇಂಗಲು ಅವಕಾಶ ಕಲ್ಪಿಸುವುದು. ಗಾಳಿ ಮುಖಾಂತರ ಕೀಟನಾಶಕಗಳ ಹರಡುವಿಕೆಯನ್ನು ತಡೆಯುವುದು

❖ **ತೋಟದ ಗಡಿ ಸುತ್ತಲೂ ತಡೆ ಗಿಡಗಳನ್ನು ಬೆಳೆಸುವುದು (To Grow border plants):** ಕೀಟನಾಶಕಗಳನ್ನು ಹೆಚ್ಚು ಪ್ರೆಷರ್ ಇರುವ ಸ್ಪ್ರೇಯರ್, ಬೂಮರ್ ಅಥವಾ ಡ್ರೋನ್ ಬಳಸಿ ಸಿಂಪರಣೆ ಮಾಡಿದಾಗ ದೊಡ್ಡ ಕಣಗಳು ತಕ್ಷಣ ಕೆಳಗೆ ಬೀಳುತ್ತದೆ. ಆದರೆ 150 ಮೈಕ್ರಾನ್‌ಗಿಂತ ಸಣ್ಣದಾದ ಕಣಗಳು ಗಾಳಿಯಲ್ಲಿ ತೇಲುತ್ತಿರುತ್ತವೆ, ಇದನ್ನು ಗಾಳಿಯು ಹಲವಾರು ಮೀಟರ್ ದೂರದವರೆಗೆ ಕೊಂಡೊಯ್ಯುವ ಸಾಧ್ಯತೆ ಇದೆ. ಆದ್ದರಿಂದ ತೋಟದ ಸುತ್ತಲೂ 8–10 ಅಡಿ ಎತ್ತರದ ಗಿಡಗಳನ್ನು ಬೆಳೆಸಿ ತಡೆ ಗೋಡೆಯಂತೆ (Hedge plants) ನಿರ್ಮಿಸಿ, ಕೆಳಭಾಗದಲ್ಲಿ ಶೇಡ್‌ನೆಟ್ ಕಟ್ಟಬೇಕು. ಇದರಿಂದ ಹಿಪ್ಪುನೇರಳೆ ಎಲೆಗಳ ಮೇಲೆ ಕೀಟನಾಶಕದ ಅಂಶವು ನೇರವಾಗಿ ಬಂದು ನೆಲೆಗೊಳ್ಳುವುದನ್ನು ಸ್ವಲ್ಪ ಪ್ರಮಾಣದಲ್ಲಿ ತಡೆಗಟ್ಟಬಹುದು.

❖ **ನೆರೆಯವರೊಂದಿಗೆ ಹೊಂದಾಣಿಕೆ:** ತರಕಾರಿ, ಹೂ, ಹಣ್ಣು ಬೆಳೆಯುವ ತೋಟದ ಪಕ್ಕದಲ್ಲಿ, ಹಿಪ್ಪುನೇರಳೆ ತೋಟ/ ಹುಳು ಸಾಕಾಣಿಕಾ ಮನೆ ಇದ್ದರೆ, ಇತರೆ ಬೆಳೆಗಳಿಗೆ ಕೀಟನಾಶಕಗಳ ಸಿಂಪರಣೆಯನ್ನು ಹಿಪ್ಪುನೇರಳೆ ಸೊಪ್ಪು/ಹುಳು ಸಾಕಾಣಿಕೆ ಇಲ್ಲದೇ ಇದ್ದಾಗ ಸಿಂಪಡಿಸಲು ಕೋರಿಕೊಂಡು, ನೆರೆಯವರೊಂದಿಗೆ ಉತ್ತಮ ಭಾಂದವ್ಯ ಹೊಂದಿ ರೇಷ್ಮೆಹುಳುವನ್ನು ರಕ್ಷಿಸಬಹುದು.

| ಲಕ್ಷಣ | ಕಾರಣ |
|---|---|
| ಹುಳುಗಳು ಆರೋಗ್ಯವಾಗಿದ್ದು, ನಿಗದಿತ ಸಮಯಕ್ಕೆ ಮಾಮೂಲಿಯಾಗಿ ಹಣ್ಣಾದರೂ, ಚಂದ್ರಿಕೆಗೆ ಬಿಡುವ ಕೊನೆಯ ಹಂತದಲ್ಲಿ ದೇಹ ಊದಿಕೊಂಡು, ಮೋಟಾಗಿ ಹುಳು ಗೂಡು ಕಟ್ಟದೆ ಸಾವನ್ನಪ್ಪುವುದು ಅಥವಾ ಕಳಪೆ ಗೂಡು ಕಟ್ಟುವುದು ಮತ್ತು ಕಟ್ಟಿದ ಗೂಡುಗಳಲ್ಲಿ ಹುಳುಗಳು ಅರ್ಧ ಭಾಗ ಹುಳುವಾಗಿ ಇನ್ನುಳಿದ ಅರ್ಧ ಭಾಗ ಕೋಶವಾಗಿ ಮಾರ್ಪಾಡಾಗುವುದು. (ಚಿತ್ರ–4–8) | ❖ **ಮಣ್ಣಿನಿಂದ ಕಾಂಡದ ಮುಖಾಂತರ ಸೊಪ್ಪಿಗೆ:** ತರಕಾರಿ ಮತ್ತು ಇತರೆ ಕೃಷಿ ಬೆಳೆಗಳಿಗೆ ಕೀಟನಾಶಕಗಳನ್ನು ಸಿಂಪಡಿಸಿದ ತೋಟಗಳಲ್ಲಿ ಹೊಸದಾಗಿ ಹಿಪ್ಪುನೇರಳೆ ಬೆಳೆಸಿದಾಗ, ಮಣ್ಣಿನಿಂದ ಹಿಪ್ಪುನೇರಳೆ ಕಾಂಡದ ಮುಖಾಂತರ ಹೀರಿಕೊಳ್ಳುವುದರಿಂದ ಇಂತಹ ಕೀಟನಾಶಕದ ಶೇಷಾಂಶವಿರುವ ಸೊಪ್ಪನ್ನು ಹುಳುಗಳು ತಿನ್ನುವುದರಿಂದ (ಮಣ್ಣಿನಲ್ಲಿ ಕೀಟನಾಶಕದ ಪ್ರಮಾಣ ಕಡಿಮೆಯಿದ್ದಾಗ) ಮೇಲಿನ ಲಕ್ಷಣ ತೋರುತ್ತವೆ.<br>❖ ಇದಲ್ಲದೆ ಹಿಪ್ಪುನೇರಳೆಗೆ ತಗಲುವ ಕೀಟಗಳ ನಿಯಂತ್ರಣಕ್ಕೆ ಬಳಸುವ ಕೀಟನಾಶಕಗಳ ಸುರಕ್ಷತಾ ಅವಧಿಗಿಂತ (Safety Period) ಮೊದಲೇ ಸೊಪ್ಪನ್ನು ರೇಷ್ಮೆ ಹುಳುಗಳಿಗೆ ನೀಡಿದರೆ ಈ ರೀತಿಯಾಗುತ್ತದೆ. |

**ನಿರ್ವಹಣೆ:**

- **ಮಣ್ಣಿನಲ್ಲಿ ಕೀಟನಾಶಕದ ಪ್ರಮಾಣ ಕಡಿಮೆ ಮಾಡುವುದು:** ಮೇಲೆ ತಿಳಿಸಿದ ನಿರ್ವಹಣಾ ಕ್ರಮ ಅನುಸರಿಸುವುದರ ಜೊತೆಗೆ,
- **ಹುಳುಗಳಿಗೆ ಸೊಪ್ಪು ಬದಲಾಯಿಸುವಿಕೆ:** ಸಮಸ್ಯಾತ್ಮಕ ತೋಟದ ಸೊಪ್ಪಿನಿಂದ ಗೂಡು ಕಟ್ಟುವ ಹಂತದಲ್ಲಿಯ ತೊಂದರೆ ತಪ್ಪಿಸಲು ಮಣ್ಣಿನಲ್ಲಿ ಕೀಟನಾಶಕದ ಪ್ರಮಾಣ ಕಡಿಮೆ ಆಗುವವರೆಗೆ 5ನೇ ಹಂತದ 2ನೇ ದಿನದಿಂದ 6ನೇ ದಿನದವರೆಗೆ ಬೇರೆ ತೋಟದ ಕೀಟನಾಶಕದ ಶೇಷಾಂಶವಿಲ್ಲದ ಉತ್ತಮ ಸೊಪ್ಪನ್ನು ಕೊಟ್ಟು ಮೇಯಿಸುವುದು.

| ಲಕ್ಷಣ | ಕಾರಣ |
|---|---|
| ಹುಳುಗಳ ಜೀವಿತಾವಧಿ ವಿಸ್ತರಣೆಗೊಂಡು 5ನೇ ಹಂತದಲ್ಲಿ 12–15 ದಿನವಾದರೂ ಸೊಪ್ಪು ತಿನ್ನುತ್ತಾ ಉಳಿದು ಹಣ್ಣಾಗದಿರುವುದು, ನಂತರ ಹಣ್ಣಾದರೂ ಗೂಡು ಕಟ್ಟದಿರುವುದು. | **ಗಾಳಿ ಮುಖಾಂತರ ಸೊಪ್ಪಿನ ಮೇಲೆ ಸಂಪರ್ಕ:** ಜ್ಯುವೆನೈಲ್ ಹಾರ್ಮೋನ್ ಆಧಾರಿತ ಮತ್ತು ಇತರೆ ಕೆಲವು ಕೀಟನಾಶಕಗಳು, ಕೀಟಗಳನ್ನು ತಕ್ಷಣ ಸಾಯಿಸದೆ ಜೀವಿತಾವಧಿ ವಿಸ್ತರಣೆಗೊಳಿಸುತ್ತದೆ. ಅಂದರೆ ಜೀವನ ಚಕ್ರದಲ್ಲಿ, ಕೀಟವು ಹುಳುವಾಗಿಯೇ ಉಳಿದು ಕೋಶವಾಗಿ ಮಾರ್ಪಾಡಾಗದೆ ಸಂತಾನಾಭಿವೃದ್ಧಿಯಿಲ್ಲದೇ ಜೀವನ ಚಕ್ರ ಅಂತ್ಯಗೊಳ್ಳುತ್ತದೆ. ದೊಡ್ಡ ಗಾತ್ರದ ಬೂಮರ್/ಪ್ರೆಷರ್ ಪಂಪ್‌ಗಳಿಂದ ಇಂತಹ ಕೀಟನಾಶಕಗಳನ್ನು ಸಿಂಪಡಿಸಿದಾಗ, ತುಂತುರು ಕಣಗಳು ಗಾಳಿಯ ಮೂಲಕ ಪಸರಿಸಿ, ಸೊಪ್ಪಿನ ಮೇಲೆ ನೆಲೆ ನಿಂತಾಗ ಅಂತಹ ಸೊಪ್ಪನ್ನು ತಿಂದ ರೇಷ್ಮೆಹುಳುವಿನ ಜೀವಿತಾವಧಿಯೂ ವಿಸ್ತರಣೆಗೊಳ್ಳುತ್ತದೆ. ಈ ಲಕ್ಷಣದ ಬಗ್ಗೆ ಸಂಸ್ಥೆಯಲ್ಲಿ ಹೆಚ್ಚಿನ ಅಧ್ಯಯನ ಕೈಗೊಳ್ಳಲಾಗುತ್ತಿದೆ. |

**ನಿರ್ವಹಣೆ:**

- **ಗಾಳಿ ಮುಖಾಂತರ ಹರಡುವಿಕೆಯನ್ನು ತಡೆಯುವುದು:** ಕೀಟನಾಶಕದಿಂದ ಹಿಪ್ಪುನೇರಳೆ ಸೊಪ್ಪು ಕಲುಷಿತಗೊಳ್ಳದಂತೆ ಮಾಡಬೇಕು. ಹಿಪ್ಪುನೇರಳೆ ತೋಟದ ಗಡಿಯ ಸುತ್ತಲೂ ತಡೆ ಗಿಡಗಳನ್ನು ಬೆಳೆಸುವುದು (To Grow border plants). ಮೇಲೆ ವಿವರಿಸಲಾಗಿದೆ.
- **ಹಿಪ್ಪುನೇರಳೆ ತೋಟದಲ್ಲಿ ಕೀಟನಾಶಕಗಳನ್ನು ನಿರ್ಬಂಧಿಸುವುದು:** ಹಿಪ್ಪುನೇರಳೆ ತೋಟದ ಪಕ್ಕದಲ್ಲಿ ತರಕಾರಿ, ಹೂ, ಹಣ್ಣು ಬೆಳೆಯುತ್ತಿದ್ದರೆ, ತೋಟದಲ್ಲಿ ಹಿಪ್ಪುನೇರಳೆ ಸೊಪ್ಪು ಇಲ್ಲದೇ ಇದ್ದಾಗ ತರಕಾರಿ ತೋಟಕ್ಕೆ ಕೀಟನಾಶಕಗಳ ಸಿಂಪರಣೆಯನ್ನು ಕೈಗೊಳ್ಳುವುದು.
- **ಹುಳುಸಾಕಾಣಿಕೆ ಮನೆಯ ಹತ್ತಿರ ಕೀಟನಾಶಕಗಳನ್ನು ನಿರ್ಬಂಧಿಸುವುದು:** ಹಸು/ಮೇಕೆ/ನಾಯಿ/ಯಾವುದೇ ಪ್ರಾಣಿಯನ್ನು ಸಾಕಾಣಿಕೆ ಮಾಡುತ್ತಿದ್ದರೆ, ಅವುಗಳಿಗೆ ಹುಳು ಸಾಕಾಣಿಕಾ ಮನೆಯ ಪಕ್ಕದಲ್ಲಿ ಯಾವುದೇ ಕೀಟನಾಶಕ ಸಿಂಪಡಿಸಬಾರದು. ಸಾಕಾಣಿಕಾ ಮನೆಯಿಂದ ದೂರದಲ್ಲಿ ಸಿಂಪಡಿಸುವುದರಿಂದ ಸಾಕಾಣಿಕಾ ಮನೆಯ ಹತ್ತಿರ ಕೀಟನಾಶಕಗಳ ವಾಸನೆ ಅಥವಾ ಸೊಪ್ಪಿನ ಸಂಪರ್ಕಕ್ಕೆ ಬರುವುದನ್ನು ತಡೆಗಟ್ಟಬಹುದು.
- **ಹುಳುಗಳಿಗೆ ಮೌಲ್ಟಿಂಗ್ ಹಾರ್ಮೋನು ಬಳಕೆ ಅನುಪಯುಕ್ತ:** ಜೀವಿತಾವಧಿ ವಿಸ್ತರಣೆಗೊಂಡ ನಂತರ ಮೌಲ್ಟಿಂಗ್ ಹಾರ್ಮೋನುಗಳಾದ 'ಚೇತನ' ಅಥವಾ 'ಸಂಪೂರ್ಣ' ಶಿಫಾರಸ್ಸಿನಂತೆ ಸಿಂಪರಣೆ ಮಾಡಿದರೂ ಹುಳುಗಳು ಹಣ್ಣಾಗುವುದಿಲ್ಲ, ಹಣ್ಣಾದಂತೆ ಕಂಡರೂ ಗೂಡು ಕಟ್ಟಲು ವಿಫಲವಾಗುತ್ತವೆ.

## ರೇಷ್ಮೆಹುಳುಗಳು ಕೀಟನಾಶಕ/ರಾಸಾಯನಿಕಗಳೊಂದಿಗೆ ಸಂಪರ್ಕಕ್ಕೆ ಬರುವ ಇತರೆ ಸಾಧ್ಯತೆಗಳು

- ಹಣ್ಣು ಹುಳು ಬಿಟ್ಟ ಚಂದ್ರಿಕೆಗಳಿಗೆ ಇರುವೆ ಬರದಂತೆ ಬಿ.ಹೆಚ್.ಸಿ., ಇರುವೆ ಪುಡಿ, ಲಕ್ಷ್ಮಣರೇಖೆ ಅಥವ ಇನ್ನಿತರೆ ಯಾವುದೇ ಕೀಟನಾಶಕ ಉಪಯೋಗಿಸಬಾರದು. ಅವುಗಳ ಅಸಮರ್ಪಕ ಬಳಕೆಯಿಂದ ಅದರ ವಾಸನೆಗೆ ಚಂದ್ರಿಕೆಯಲ್ಲಿನ ಕೆಳಭಾಗದಲ್ಲಿರುವ ಹುಳುಗಳು ಕೆಳಗೆ ಬಿದ್ದು, ಮೋಟು ಹುಳುಗಳಾಗಿ ಸಾವನ್ನಪ್ಪುತ್ತವೆ ಅಥವಾ ತಲೆಯನ್ನು ತಿರುಗಿಸುತ್ತಾ ಬಿದ್ದು ಸಾವನ್ನಪ್ಪುತ್ತವೆ. ಇದರ ಬದಲಾಗಿ ಚಂದ್ರಿಕೆಯ ಕಾಲುಗಳಿಗೆ ಗ್ರೀಸ್ ಹಚ್ಚುವುದು ಅಥವಾ ಊಜಿ ಪುಡಿ ಇಲ್ಲವೆ ಹಾಸಿಗೆ ಸೋಂಕು ನಿವಾರಕ ಉದುರಿಸುವುದು.
- ರೇಷ್ಮೆ ಹುಳು ಸಾಕಾಣಿಕಾ ಮನೆಗೆ/ಗೋಡೆಗೆ ಅಥವ ಹುಳು ಸಾಕಾಣಿಕಾ ಸ್ಟಾಂಡ್‌ಗೆ ಯಾವುದೇ ಬ್ರಾಂಡ್‌ನ ಬಣ್ಣವನ್ನು ಹಚ್ಚದೆ, ಗೋಡೆಗಳಿಗೆ ಸುಣ್ಣವನ್ನು ಮಾತ್ರ ಬಳಸಿದರೆ ತಕ್ಷಣ ಹುಳು ಸಾಕಾಣಿಕೆ ಮಾಡಬಹುದು. ಬ್ರಾಂಡೆಡ್ ಕಂಪನಿಗಳ ಬಣ್ಣ ಹಚ್ಚಿದರೆ ಕನಿಷ್ಠ ನಾಲ್ಕು ತಿಂಗಳ ನಂತರ ಹುಳು ಸಾಕಾಣಿಕೆ ಮಾಡಬೇಕು.
- ರಾಸಾಯನಿಕ ಸಿಂಪಡಿಸಿದ ಎತ್ತರದ ಪ್ರದೇಶಗಳಲ್ಲಿಯ ಇತರೆ ಬೆಳೆಗಳ ತೋಟಗಳಿಂದ ಮಳೆಯ ನೀರು ತಗ್ಗು ಪ್ರದೇಶದ ಹಿಪ್ಪುನೇರಳೆ ತೋಟಕ್ಕೆ ಹರಿದು ಮಣ್ಣು ಕಲುಷಿತವಾಗುತ್ತದೆ. ಅಂತಹ ತೋಟದ ಸೊಪ್ಪನ್ನು ತಿಂದ ಹುಳುಗಳು ವಾಂತಿ ಮಾಡಿಕೊಂಡು ಸಾವನ್ನಪ್ಪುತ್ತವೆ. ಆದ್ದರಿಂದ ಆ ತೋಟಗಳಿಂದ ಮಳೆಗಾಲದಲ್ಲಿ ನೀರು ಹಿಪ್ಪುನೇರಳೆ ತೋಟಕ್ಕೆ ಹರಿದುಬಾರದಂತೆ ತಡೆಗಟ್ಟಿ ಬೇರೆ ಕಡೆಗೆ ಹರಿಯಲು ಅನುವು ಮಾಡಬೇಕು.
- ಅನಿಲ/ರಾಸಾಯನಿಕಗಳ ತಯಾರಿಕಾ ಕಾರ್ಖಾನೆಯಿಂದ ಹೊರಬರುವ ವಾಸನೆ ಹುಳುಗಳಿಗೆ ಹಾನಿಯುಂಟುಮಾಡುವ



**ಕೀಟನಾಶಕದ ಪ್ರಮಾಣವು ಹಿಪ್ಪುನೇರಳೆ ತೋಟದ ಮಣ್ಣು ಮತ್ತು ಸೊಪ್ಪಿನಲ್ಲಿ ಜಾಸ್ತಿಯಾದರೆ ರೇಷ್ಮೆಹುಳು ವಿನಲ್ಲಿ ಕಾಣುವ ವಿವಿಧ ಲಕ್ಷಣಗಳು:** ಚಿತ್ರ 1–3: ಕುಗ್ಗಿದ, ಕೊಕ್ಕೆ ಆಕಾರವಾದ ದೇಹ, ವಾಂತಿ ಮಾಡಿಕೊಂಡು ದೇಹವೆಲ್ಲಾ ಹಸಿರು ಬಣ್ಣಕ್ಕೆ ತಿರುಗಿ, ಹಿಕ್ಕೆ ಸರದಂತಾಗಿರುವುದು. ಕೀಟನಾಶಕದ ಪ್ರಮಾಣವು ಕಡಿಮೆಯಿದ್ದಾಗ ರೇಷ್ಮೆ ಹುಳುವಿನಲ್ಲಿ ಕಾಣುವ ವಿವಿಧ ಲಕ್ಷಣಗಳು: ಚಿತ್ರ 4–5: ಹಣ್ಣಾದ ಹುಳುಗಳ ದೇಹ ಊದಿಕೊಂಡು, ಮೋಟಾಗಿ ಹುಳು ಗೂಡು ಕಟ್ಟದೆ ಇರುವುದು. ಚಿತ್ರ 6–7: ಕಳಪೆ ಗೂಡು ಕಟ್ಟುವುದು. ಚಿತ್ರ 8: ಹುಳುಗಳ ಅರ್ಧ ಭಾಗ ಹುಳುವಾಗಿ ಉಳಿದು ಇನ್ನರ್ಧ ಭಾಗ ಕೋಶವಾಗಿ ಮಾರ್ಪಾಡಾಗುವುದು. ಚಿತ್ರ 9: ಸಿಂಪಡಿಸಿದ ಮೆಟ್ರಿಬ್ಯುಜಿನ್ ಕಳೆನಾಶಕವನ್ನು ಮಣ್ಣಿನಿಂದ ಹೀರಿಕೊಂಡು ಹಿಪ್ಪುನೇರಳೆ ಗಿಡವು ಒಣಗುತ್ತಿರುವುದು.

ದರಿಂದ, ಹಿಪ್ಪುನೇರಳೆ ತೋಟ ಮತ್ತು ಹುಳು ಸಾಕಾಣಿಕಾ ಮನೆಯು ಕಾರ್ಖಾನೆಗಳಿಂದ ದೂರವಿರಬೇಕು.

- ಹುಳು ಸಾಕಾಣಿಕಾ ಮನೆಯೊಳಗೆ ಯಾವುದೇ ಕಾರಣಕ್ಕೂ ಕೀಟನಾಶಕದ ಬಾಟಲಿಗಳನ್ನು ತೆರೆಯುವುದಾಗಲಿ ಅಥವಾ ಸಿಂಪರಣೆ ಮಾಡುವುದಾಗಲಿ ಮಾಡಬಾರದು.
- ಹಿಪ್ಪುನೇರಳೆ ತೋಟದಲ್ಲಿ ಕೀಟಗಳ ನಿರ್ವಹಣೆಗೆ ಸಂಶೋಧನಾ ಸಂಸ್ಥೆಗಳಿಂದ ಶಿಫಾರಸ್ಸಾದ ಕೀಟನಾಶಕಗಳನ್ನು ಮಾತ್ರ ಬಳಸಬೇಕು. ಬದಲಿಗೆ ಬೇರೆ ಕೃಷಿ ಬೆಳೆಗಳಿಗೆ ಶಿಫಾರಿತ ಗೊಂಡದ್ದು ಅಥವಾ ಕೀಟನಾಶಕದ ಅಂಗಡಿಯವನ ಊಹೆಯ ಮೇರೆಗೆ ಕೊಟ್ಟದ್ದನ್ನು ಹಿಪ್ಪುನೇರಳೆಗೆ ಸಿಂಪಡಿಸಬಾರದು. ಇದಲ್ಲದೇ, ಮಾರಾಟಗಾರರು ಹೇಳುವ ಕೆಲವು ಮಣ್ಣು/ಎಲೆ/ ಜೈವಿಕ ಸಿಂಪರಕಗಳಲ್ಲಿ ಯಾವ ರಾಸಾಯನಿಕವಿರುವುದೆಂಬುದು ಗೊತ್ತಿಲ್ಲದೆ ಕೀಟನಾಶಕ/ಎಲೆ ಸಿಂಪರಕಗಳನ್ನು ಬಳಸಬಾರದು.
- ಹಿಪ್ಪುನೇರಳೆಗೆ ಶಿಫಾರಿತ ಕೀಟನಾಶಕಗಳನ್ನು ಅಂದಾಜು ಪ್ರಮಾಣ ಮಾಡದೇ ಶಿಫಾರಿತ ಪ್ರಮಾಣದಲ್ಲಿಯೇ ಬಳಸಬೇಕು. ಶಿಫಾರಿತ ಕೀಟನಾಶಕಗಳನ್ನು ಬಳಸಿದರೂ ಸುರಕ್ಷತಾ ಅವಧಿಗಿಂತ (Safety Period) ಮುಂಚಿತವಾಗಿ ಹಿಪ್ಪುನೇರಳೆ ಸೊಪ್ಪನ್ನು ಸಾಕಾಣಿಕೆಗೆ ಬಳಸಬಾರದು.
- ಹಿಪ್ಪುನೇರಳೆ ತೋಟದಲ್ಲಿ ಕಳೆ ನಿರ್ವಹಣೆಗಾಗಿ ಕಳೆನಾಶಕಗಳನ್ನು ಬಳಸದೆ ಉಳುಮೆ ಮಾಡುವುದು ಉತ್ತಮ.

ಕೀಟನಾಶಕಗಳು ಮತ್ತು ಕಳೆನಾಶಕಗಳು ಎಲ್ಲಾ ಬಗೆಯ ಪ್ರಾಣಿಗಳಿಗೂ ಮತ್ತು ಮನುಷ್ಯನಿಗೂ ಮಾರಕ. ಆದರೆ ರೇಷ್ಮೆಹುಳು, ಜೇನುನೊಣ, ಎರೆಹುಳು, ಮೀನಿನಂತಹ ಸೂಕ್ಷ್ಮ ಪ್ರಾಣಿಗಳಲ್ಲಿ ಕೀಟನಾಶಕಗಳ ದುಷ್ಪರಿಣಾಮ ತಕ್ಷಣ ಕಾಣುತ್ತದೆ. ಆದ್ದರಿಂದ ಎಲ್ಲಾ ಕೃಷಿಕ ಭಾಂದವರು ಯಾವುದೇ ಕೃಷಿಯಲ್ಲಿ ಕೀಟನಾಶಕ/ ಕಳೆನಾಶಕ/ ಎಲೆ/ಮಣ್ಣಿನ ಸಿಂಪರಕಗಳನ್ನು ಬಳಸಿ ಹೆಚ್ಚಿನ ಇಳುವರಿಗೆ ಮಾತ್ರ ಒತ್ತುಕೊಡದೆ, ಯಾವುದೇ ಕೃಷಿ ಬೆಳೆಗೆ ಕೀಟನಾಶಕಗಳ ಬಳಕೆಯನ್ನು ಕಡಿಮೆ ಮಾಡಿ, ಕೀಟ ಮತ್ತು ರೋಗ ನಿರ್ವಹಣೆಗಾಗಿ ಜೈವಿಕ ನಿಯಂತ್ರಣ ಕ್ರಮಗಳನ್ನು ಅನುಸರಿಸಬೇಕು. ಈ ಮೂಲಕ ಮಣ್ಣಿನ ಫಲವತ್ತತೆಯನ್ನು ಕಾಪಾಡಿ ಪರಿಸರ, ಪ್ರಾಣಿ, ಪಕ್ಷಿ ಮತ್ತು ಮನುಷ್ಯನ ಆರೋಗ್ಯದ ಕಡೆಯೂ ಗಮನಹರಿಸಬಹುದು. ಮುಂದುವರೆದು, ಕೀಟನಾಶಕಗಳ ಶೇಷಾಂಶದಿಂದ ರೇಷ್ಮೆ ಕೃಷಿಯ ಮೇಲಾಗುತ್ತಿರುವ ದುಷ್ಪರಿಣಾಮವನ್ನು ಹತೋಟಿಯಲ್ಲಿಡಲು ಮೇಲೆ ತಿಳಿಸಿರುವ ತೋಟ ನಿರ್ವಹಣಾ ಕ್ರಮಗಳನ್ನು ಪಾಲಿಸುವುದರಿಂದ ಮಣ್ಣಿನಲ್ಲಿ ಮತ್ತು ವಾತಾವರಣದಲ್ಲಿ ಕೀಟನಾಶಕದ ಪ್ರಮಾಣ ಕಡಿಮೆಯಾಗಿ, ಮುಂದೆ ಉತ್ತಮ ಸ್ಥಿರವಾದ ರೇಷ್ಮೆ ಬೆಳೆ ಬೆಳೆಯಲು ಅನುಕೂಲವಾಗುತ್ತದೆ.

**ವಿಶೇಷ ಸೂಚನೆ:** ರೇಷ್ಮೆಹುಳುವಿನ ಮೇಲೆ ಕೀಟನಾಶಕಗಳ ದುಷ್ಪರಿಣಾಮದ ಬಗೆಗಿನ ಅಧ್ಯಯನವನ್ನು ಸಂಸ್ಥೆಯೇ ಮೊದಲು ಕೈಗೊಂಡಿದ್ದು, ಸದರಿ ಮಾಹಿತಿಯನ್ನು ಕ್ಷೇತ್ರಮಟ್ಟದಲ್ಲಿ ಹೆಚ್ಚಿನ ಪ್ರಚಾರಕ್ಕಾಗಿ ಇತರೆ ಕಛೇರಿ/ಸಂಘ/ಸಂಸ್ಥೆಗಳು ವಿವಿಧ ಮಾಧ್ಯಮಗಳ ಮುಖಾಂತರ ಪ್ರಕಟಗೊಳಿಸಿದಲ್ಲಿ ಸಂಸ್ಥೆಯ ಕೊಡುಗೆಯನ್ನು ಗುರುತಿಸಿ ಕೃತಜ್ಞತೆ (acknowledge) ಸಲ್ಲಿಸಬೇಕಾಗಿ ಲೇಖಕರ ಕೋರಿಕೆ.

## 2023-24ನೇ ಸಾಲಿನಲ್ಲಿ ರೇಷ್ಮೆ ಭಾಗೀದಾರರಿಗೆ ಆದ್ಯತೆ ಮೇರೆಗೆ ಒದಗಿಸಲಾಗುವ ಸವಲತ್ತುಗಳ ವಿವರ

(ರೂ.ಲಕ್ಷಗಳಲ್ಲಿ)

ಶ್ರೀಮತಿ ವಿಜಯಲಕ್ಷ್ಮಿ, ರೇಷ್ಮೆ ಉಪನಿರ್ದೇಶಕರು, ರೇಷ್ಮೆ ನಿರ್ದೇಶನಾಲಯ, ಬೆಂಗಳೂರು. ಮೊ : 9880656066

| ಕ್ರ. ಸಂ. | ಕಾರ್ಯಕ್ರಮಗಳು | ಘಟಕ ದರ | ಸಹಾಯಧನ/ ಪ್ರೋತ್ಸಾಹಧನ | ಶೇಕಡಾವಾರು |
|---|---|---|---|---|
| | **ರಾಜ್ಯ ವಲಯ ಯೋಜನೆಗಳು** | | | |
| **I** | **ರೇಷ್ಮೆ ಅಭಿವೃದ್ಧಿ ಯೋಜನೆ** | | | |
| ಅ) | **ಸಹಾಯಧನ – 2851–00–107–1–35(106)** | | | |
| 1. | ಹಿಪ್ಪುನೇರಳೆ ತೋಟ ನಿರ್ವಹಣೆ ಸಲಕರಣೆ/ ರೇಷ್ಮೆ ಹುಳು ಸಾಕಾಣಿಕೆ ಸಲಕರಣೆಗೆ ಸಹಾಯಧನ (ಸಂ) | 0.750 | 0.5625 | 75 |
| 2. | **ಪ್ರತ್ಯೇಕ ಹುಳು ಸಾಕಾಣಿಕೆ ಮನೆ ನಿರ್ಮಾಣ (ಸಂ)** | ಒಂದು ಚದರ ಅಡಿಗೆ ರೂ.100/– ರಂತೆ ಪ್ರೋರೇಟಾ ಆಧರಿಸಿ ಕನಿಷ್ಠ 225 ಚದರ ಅಡಿಯಿಂದ ಗರಿಷ್ಠ 1000 ಚದರ ಅಡಿಯವರೆಗೆ ಸಹಾಯಧನ ನೀಡಲಾಗುವುದು. | | |
| | ಕಡಿಮೆ ವೆಚ್ಚದ ಶೆಡ್–225 ಚದರ ಅಡಿ | | | |
| | 225 ಚದರ ಅಡಿ ಮನೆಗೆ | 0.900 | 0.675 | 75 |
| | 600 ಚದರ ಅಡಿ ಮನೆಗೆ | 3.250 | 2.4375 | 75 |
| | 1000 ಚದರ ಅಡಿ ಮನೆಗೆ | 4.500 | 3.375 | 75 |
| 3. | ಚಾಕಿ ತೋಟ ನಿರ್ವಹಣೆ: ಚಾಕಿ ಸಾಕಾಣಿಕಾ ಕಟ್ಟಡ/ಚಾಕಿ ಸಲಕರಣೆಗಳ ಖರೀದಿಗೆ ಸಹಾಯಧನ (ಸಂ) | 13.000 | 9.750 | 75 |
| 4. | **ಮೌಂಟಿಂಗ್ ಹಾಲ್ (ಹಣ್ಣು ಹುಳುವಿನ ಮನೆ) ನಿರ್ಮಾಣ (ಸಂ)** | | | |
| | 20x30 = 600 ಚದರ ಅಡಿ ವಿಸ್ತೀರ್ಣ | | 0.180 | |
| | 20x50 = 1000 ಚದರ ಅಡಿ ವಿಸ್ತೀರ್ಣ | | 0.300 | |
| | 25x50 = 1250 ಚದರ ಅಡಿ ವಿಸ್ತೀರ್ಣ | | 0.375 | |
| | 30x50 = 1500 ಚದರ ಅಡಿ ವಿಸ್ತೀರ್ಣ | | 0.450 | |
| | 30x60 = 1800 ಚದರ ಅಡಿ ವಿಸ್ತೀರ್ಣ | | 0.500 | |
| 5. | ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಉತ್ಪಾದಿಸುವ ದ್ವಿತಳಿ ರೇಷ್ಮೆ ಗೂಡಿಗೆ ಸಾಗಾಣಿಕೆ ವೆಚ್ಚ | ರೂ.10/– ಪ್ರತಿ ಕೆ.ಜಿಗೆ | | |
| 6. | **ಚಾಕಿ ವೆಚ್ಚ (ಲಕ್ಷಗಳಲ್ಲಿ)** | | | |
| | ಶುದ್ಧ ಮೈಸೂರು ತಳಿ ಚಾಕಿ ವೆಚ್ಚ | ರೂ.1500/– ಪ್ರತಿ 100 ಮೊಟ್ಟೆ ಚಾಕಿಗೆ | ರೂ.750/– ಪ್ರತಿ 100 ಮೊಟ್ಟೆ ಚಾಕಿಗೆ | 50 |
| | ದ್ವಿತಳಿ ಚಾಕಿ ವೆಚ್ಚ | ರೂ.2000/– ಪ್ರತಿ 100 ಮೊಟ್ಟೆ ಚಾಕಿಗೆ | ರೂ.1000/– ಪ್ರತಿ 100 ಮೊಟ್ಟೆ ಚಾಕಿಗೆ | 50 |
| ಆ)& ಇ) | **ವಿಶೇಷ ಘಟಕ ಯೋಜನೆ – 2851–00–107–1–35(422)** **ಗಿರಿಜನ ಉಪ ಯೋಜನೆ – 2851–00–107–1–35(423)** | | | |
| 1. | ಹಿಪ್ಪುನೇರಳೆ ತೋಟ ನಿರ್ವಹಣೆ ಸಲಕರಣೆ/ ರೇಷ್ಮೆ ಹುಳು ಸಾಕಾಣಿಕೆ ಸಲಕರಣೆಗೆ ಸಹಾಯಧನ (ಸಂ) | 0.750 | 0.675 | 90 |

| | | | | |
|---|---|---|---|---|
| 2. | **ಪ್ರತ್ಯೇಕ ಹುಳು ಸಾಕಾಣಿಕೆ ಮನೆ ನಿರ್ಮಾಣ (ಸಂ)** | | | |
| | ಕಡಿಮೆ ವೆಚ್ಚದ ಶೆಡ್ – 225 ಚದರ ಅಡಿ | ಒಂದು ಚದರ ಅಡಿಗೆ ರೂ.120/– ರಂತೆ ಪ್ರೋರೇಟಾ ಆಧರಿಸಿ ಕನಿಷ್ಠ 225 ಚದರ ಅಡಿಯಿಂದ ಗರಿಷ್ಠ 1000 ಚದರ ಅಡಿಯವರೆಗೆ ಸಹಾಯಧನ ನೀಡಲಾಗುವುದು. | | |
| | 225 ಚದರ ಅಡಿ ಮನೆಗೆ | 0.900 | 0.810 | 90 |
| | 600 ಚದರ ಅಡಿ ಮನೆಗೆ | 3.250 | 2.925 | 90 |
| | 1000 ಚದರ ಅಡಿ ಮನೆಗೆ | 4.500 | 4.050 | 90 |
| 3. | ಚಾಕಿ ತೋಟ ನಿರ್ವ ಹಣೆ:ಚಾಕಿ ಸಾಕಾಣಿಕಾ ಕಟ್ಟಡ/ ಚಾಕಿ ಸಲಕರಣೆಗಳ ಖರೀದಿಗೆ ಸಹಾಯಧನ (ಸಂ) | 13.000 | 11.700 | 90 |
| 4. | **ಮೌಂಟಿಂಗ್ ಹಾಲ್ (ಹಣ್ಣು ಹುಳುವಿನ ಮನೆ) ನಿರ್ಮಾಣ (ಸಂ)** | | | |
| | 20x30 = 600 ಚದರ ಅಡಿ ವಿಸ್ತೀರ್ಣ | | 0.240 | |
| | 20x50 = 1000 ಚದರ ಅಡಿ ವಿಸ್ತೀರ್ಣ | | 0.400 | |
| | 25x50 = 1250 ಚದರ ಅಡಿ ವಿಸ್ತೀರ್ಣ | | 0.500 | |
| | 30x50 = 1500 ಚದರ ಅಡಿ ವಿಸ್ತೀರ್ಣ | | 0.600 | |
| | 30x60 = 1800 ಚದರ ಅಡಿ ವಿಸ್ತೀರ್ಣ | | 0.750 | |
| 5. | **ರೀಲಿಂಗ್ ಶೆಡ್ ನಿರ್ಮಾಣಕ್ಕೆ ಸಹಾಯಧನ (ಸಂ)** | | | |
| | 1200 ಚದರ ಅಡಿ | 7.200 | 6.480 | 90 |
| | 900 ಚದರ ಅಡಿ | 5.400 | 4.860 | 90 |
| | 600 ಚದರ ಅಡಿ | 3.600 | 3.240 | 90 |
| 6. | **ಮಲ್ಟಿ ಎಂಡ್ ರೀಲಿಂಗ್ ಘಟಕ ಅಳವಡಿಕೆ (ಸಂ)** | | | |
| | 6 ಬೇಸಿನ್ | 11.885 | 10.6965 | 90 |
| 7. | **ಸುಧಾರಿತ ಕಾಟೇಜ್/ಫಿಲೇಚರ್ ಬೇಸಿನ್ ಘಟಕಗಳ ಅಳವಡಿಕೆಗೆ ಸಹಾಯಧನ (ಸಂ)** | | | |
| | 48 ತುದಿಗಳು | 3.92082 | 3.52874 | 90 |
| | 36 ತುದಿಗಳು | 3.535 | 3.1815 | 90 |
| 8. | **ಇಟಾಲಿಯನ್ ಕಾಟೇಜ್/ಫಿಲೇಚರ್ ಬೇಸಿನ್ ಘಟಕಗಳ ಅಳವಡಿಕೆಗೆ ಸಹಾಯಧನ (ಸಂ)** | | | |
| | 3 ಟೇಬಲ್ – 6 ಬೇಸಿನ್ | 1.500 | 1.350 | 90 |
| | 2 ಟೇಬಲ್ | 1.000 | 0.900 | 90 |
| | 1 ಟೇಬಲ್ | 0.500 | 0.450 | 90 |
| | **ಇಟಾಲಿಯನ್ ಕಾಟೇಜ್/ಫಿಲೇಚರ್ ಬೇಸಿನ್ ಘಟಕಗಳ ಉನ್ನತೀಕರಣಕ್ಕಾಗಿ ಸಹಾಯಧನ (ಸಂ)** | | | |
| | 3 ಟೇಬಲ್ – 6 ಬೇಸಿನ್ | 0.29487 | 0.26538 | 90 |
| | 2 ಟೇಬಲ್ | 0.20435 | 0.18391 | 90 |
| | 1 ಟೇಬಲ್ | 0.11758 | 0.10582 | 90 |

| | | | | |
|---|---|---|---|---|
| 9. | **ಬಾಯ್ಲರ್ ಅಳವಡಿಕೆಗೆ ಸಹಾಯಧನ** | | | |
| | 50 ಕೆ.ಜಿ ಹಬೆ ಸಾಮರ್ಥ್ಯ | 1.580 | 1.422 | 90 |
| 10. | **ಸೋಲಾರ್ ವಾಟರ್ ಹೀಟರ್ ಅಳವಡಿಕೆಗೆ ಸಹಾಯಧನ (ಸಂ)** | | | |
| | 1000 ಲೀಟರ್ ಸಾಮರ್ಥ್ಯ–ETC | 2.250 | 2.0250 | 90 |
| | 1000 ಲೀಟರ್ ಸಾಮರ್ಥ್ಯ–FPC | 2.950 | 2.6550 | 90 |
| | 500 ಲೀಟರ್ ಸಾಮರ್ಥ್ಯ–ETC | 0.960 | 0.8640 | 90 |
| | 500 ಲೀಟರ್ ಸಾಮರ್ಥ್ಯ–FPC | 1.410 | 1.2690 | 90 |
| | 200 ಲೀಟರ್ ಸಾಮರ್ಥ್ಯ–ETC | 0.420 | 0.3780 | 90 |
| | 200 ಲೀಟರ್ ಸಾಮರ್ಥ್ಯ–FPC | 0.605 | 0.5445 | 90 |
| 11. | **ಜನರೇಟರ್/ಶಬ್ಧರಹಿತ ಜನರೇಟರ್ ಅಳವಡಿಕೆಗೆ ಸಹಾಯಧನ (ಸಂ)** | | | |
| | 5 ಕೆ.ವಿ–3 ಫೇಸ್ | 2.070 | 1.8630 | 90 |
| | 5 ಕೆ.ವಿ–ಸಿಂಗಲ್ ಫೇಸ್ | 1.930 | 1.7370 | 90 |
| | 2 ಕೆ.ವಿ | 0.900 | 0.8100 | 90 |
| 12. | **ಸೋಲಾರ್ ಪವರ್ ಜನರೇಟರ್ ಅಳವಡಿಕೆಗೆ ಸಹಾಯಧನ (ಸಂ)** | | | |
| | ¼ ಹೆಚ್.ಪಿ | 1.250 | 1.1250 | 90 |
| | ½ ಹೆಚ್.ಪಿ | 1.970 | 1.7730 | 90 |
| 13. | ಹೀಟ್ ರಿಕವರಿ ಘಟಕ ಅಳವಡಿಕೆಗೆ ಸಹಾಯಧನ (ಸಂ) | 0.250 | 0.225 | 90 |
| **II** | **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (PMKSY)** | | | |
| | **ಸಹಾಯಧನ – 2851–00–107–1–49(ಸಹಾಯಧನ–106/ವಿಶೇಷ ಘಟಕ ಯೋಜನೆ–422/ಗಿರಿಜನ ಉಪ ಯೋಜನೆ – 423–Topup)–2401–00–108–2–30(059)(106)(422)(423)** | | | |
| | ಹನಿ ನೀರಾವರಿ ಘಟಕ ಅಳವಡಿಕೆಗೆ ಸಹಾಯಧನ | | ಸಾಮಾನ್ಯ–75 | |
| | | | ಪ.ಜಾ/ಪ.ಪಂ.–90 | |
| **III** | **ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯಿದೆ 2013ರಡಿ ಬಳಕೆಯಾಗದೆ ಇರುವ ಮೊತ್ತ ಯೋಜನೆ** | | | |
| | **ವಿಶೇಷ ಘಟಕ ಯೋಜನೆ – 2851–00–107–1–50(422)/ ಗಿರಿಜನ ಉಪ ಯೋಜನೆ – 2851–00–107–1–50(423)** | | | |
| | ಹಿಪ್ಪುನೇರಳೆ ತೋಟ ನಿರ್ವಹಣೆ ಸಲಕರಣೆ/ ರೇಷ್ಮೆ ಹುಳು ಸಾಕಾಣಿಕೆ ಸಲಕರಣೆಗೆ ಸಹಾಯಧನ (ಸಂ) | 0.750 | 0.675 | 90 |
| **IV** | **ಬೆಲೆ ಸ್ಥಿರೀಕರಣ ನಿಧಿ ಅನುದಾನದಿಂದ ಅನುಷ್ಠಾನಗೊಳ್ಳುವ ಕಾರ್ಯಕ್ರಮಗಳು ಯೋಜನೆ** | | | |
| | **ಸಹಾಯಧನ – 2851–00–107–1–51(106)** | | | |
| 1. | ಮೈಸೂರು ಬಿತ್ತನೆ ಗೂಡಿಗೆ ಬೋನಸ್ (ಮ.ಟನ್) | | ರೂ. 225/– ಪ್ರತಿ ಕೆ.ಜಿಗೆ | |
| 2. | ದ್ವಿತಳಿ ಬಿತ್ತನೆ ಗೂಡಿಗೆ ಬೋನಸ್ (ಮೆ.ಟನ್) | | ರೂ. 225/– ಪ್ರತಿ ಕೆ.ಜಿಗೆ | |
| 3. | **ಉತ್ಪಾದಕತೆ ಮತ್ತು ಗುಣಮಟ್ಟ ಆಧಾರಿತ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ (ಮೆ.ಟನ್)** | | | |
| | ಮೈಸೂರು ತಳಿ | | ರೂ. 120/– ಪ್ರತಿ ಕೆ.ಜಿಗೆ | |
| | ದ್ವಿತಳಿ | | ರೂ. 120/– ಪ್ರತಿ ಕೆ.ಜಿಗೆ | |

| | | | | |
|---|---|---|---|---|
| 4 | ರೇಷ್ಮೆ ಬೆಳೆಗಾರರು ಉತ್ಪಾದಿಸಿ ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ದ್ವಿತಳಿ ರೇಷ್ಮೆ ಗೂಡಿಗೆ ಪ್ರೋತ್ಸಾಹಧನ | ರೂ. 10/– ಪ್ರತಿ ಕೆ.ಜಿಗೆ | | |
| 5 | ಗುಣಮಟ್ಟದ ಆಧಾರಿತ ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನ (ಮೆ.ಟನ್) | ಚರಕಾ–ರೂ.25/– ಪ್ರತಿ ಕೆ.ಜಿ.ಗೆ, ಕಾಟೇಜ್ ಬೇಸಿನ್ ರೀಲಿಂಗ್ ಘಟಕ–ರೂ.30/– ಪ್ರತಿ ಕೆ.ಜಿ.ಗೆ, ಮಲ್ಟಿ ಎಂಡ್ ರೀಲಿಂಗ್ ಘಟಕ–ರೂ.45/– ಪ್ರತಿ ಕೆ.ಜಿ.ಗೆ, ಸ್ವಯಂಚಾಲಿತ ರೀಲಿಂಗ್ ಘಟಕ–ರೂ.50/– ಪ್ರತಿ ಕೆ.ಜಿ.ಗೆ | | |
| 6 | **ಮಲ್ಟಿ ಎಂಡ್ ರೀಲಿಂಗ್ ಘಟಕ ಅಳವಡಿಕೆ (ಸಂ)** | | | |
| | 6 ಬೇಸಿನ್ | 11.885 | 8.91375 | 75 |
| 7. | **ರೀಲಿಂಗ್ ಶೆಡ್ ನಿರ್ಮಾಣಕ್ಕೆ ಸಹಾಯಧನ (ಸಂ)** | | | |
| | 1200 ಚದರ ಅಡಿ | 7.200 | 3.600 | 50 |
| | 900 ಚದರ ಅಡಿ | 5.400 | 2.700 | 50 |
| | 600 ಚದರ ಅಡಿ | 3.600 | 1.800 | 50 |
| 8 | **ಸುಧಾರಿತ ಕಾಟೇಜ್/ಫಿಲೇಚರ್ ಬೇಸಿನ್ ಘಟಕಗಳ ಅಳವಡಿಕೆಗೆ ಸಹಾಯಧನ (ಸಂ)** | | | |
| | 48 ತುದಿಗಳು | 3.92082 | 2.94064 | 75 |
| | 36 ತುದಿಗಳು | 3.535 | 2.65125 | 75 |
| 9 | **ಇಟಾಲಿಯನ್ ಕಾಟೇಜ್/ಫಿಲೇಚರ್ ಬೇಸಿನ್ ಘಟಕಗಳ ಅಳವಡಿಕೆಗೆ ಸಹಾಯಧನ (ಸಂ)** | | | |
| | 3 ಟೇಬಲ್ – 6 ಬೇಸಿನ್ | 0.29487 | 0.22115 | 75 |
| | 2 ಟೇಬಲ್ | 0.20435 | 0.15326 | 75 |
| | 1 ಟೇಬಲ್ | 0.11758 | 0.08818 | 75 |
| 10 | **ಬಾಯ್ಲರ್ ಅಳವಡಿಕೆಗೆ ಸಹಾಯಧನ** | | | |
| | 50 ಕೆ.ಜಿ ಹಬೆ ಸಾಮರ್ಥ್ಯ | 1.580 | 1.185 | 75 |
| 11 | **ಸೋಲಾರ್ ವಾಟರ್ ಹೀಟರ್ ಅಳವಡಿಕೆಗೆ ಸಹಾಯಧನ (ಸಂ)** | | | |
| | 1000 ಲೀಟರ್ ಸಾಮರ್ಥ್ಯ–ETC | 2.250 | 1.6875 | 75 |
| | 1000 ಲೀಟರ್ ಸಾಮರ್ಥ್ಯ–FPC | 2.950 | 2.2125 | 75 |
| | 500 ಲೀಟರ್ ಸಾಮರ್ಥ್ಯ–ETC | 0.960 | 0.7200 | 75 |
| | 500 ಲೀಟರ್ ಸಾಮರ್ಥ್ಯ–FPC | 1.410 | 1.0575 | 75 |
| | 200 ಲೀಟರ್ ಸಾಮರ್ಥ್ಯ–ETC | 0.420 | 0.3150 | 75 |
| | 200 ಲೀಟರ್ ಸಾಮರ್ಥ್ಯ–FPC | 0.605 | 0.45375 | 75 |
| 12 | **ಜನರೇಟರ್/ಶಬ್ಧರಹಿತ ಜನರೇಟರ್ ಅಳವಡಿಕೆಗೆ ಸಹಾಯಧನ (ಸಂ)** | | | |
| | 5 ಕೆ.ವಿ – 3 ಫೇಸ್ | 2.070 | 1.5525 | 75 |
| | 5 ಕೆ.ವಿ – ಸಿಂಗಲ್ ಫೇಸ್ | 1.930 | 1.4475 | 75 |
| | 2 ಕೆ.ವಿ | 0.900 | 0.675 | 75 |

| | | | | |
|---|---|---|---|---|
| 13 | **ಸೋಲಾರ್ ಪವರ್ ಜನರೇಟರ್ ಅಳವಡಿಕೆಗೆ ಸಹಾಯಧನ (ಸಂ)** | | | |
| | ¼ ಹೆಚ್.ಪಿ. | 1.250 | 0.9375 | 75 |
| | ½ ಹೆಚ್.ಪಿ. | 1.970 | 1.4775 | 75 |
| 14 | ಹೀಟ್ ರಿಕವರಿ ಘಟಕ ಅಳವಡಿಕೆಗೆ ಸಹಾಯಧನ (ಸಂ) | 0.250 | 0.1875 | 75 |
| 15 | ರೀಲರುಗಳಿಗೆ ಒತ್ತೆ ಸಾಲ | ಬೇಡಿಕೆ ಆಧಾರಿತ | | 70 |
| 16 | ರೇಷ್ಮೆ ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ಮಹಿಳೆಯರ ಹೆಸರಿನಲ್ಲಿ ಮಂಜೂರು ಮಾಡಿದ ಸಾಲದ ಮೇಲಿನ ಬಡ್ಡಿಗೆ ಶೇ.50ರ ಸಹಾಯಧನ (ಸಂ) | ಬೇಡಿಕೆ ಆಧಾರಿತ | | |
| 17 | ಕರಕುಶಲ ವಸ್ತುಗಳ ತಯಾರಿಕೆಗೆ ಬಳಸು ಚಿಟ್ಟೆ ಕೊರೆದ ಗೂಡಿಗೆ ಶೇ.90ರ ಸಹಾಯಧನ | ಬೇಡಿಕೆ ಆಧಾರಿತ (ಗರಿಷ್ಠ) | | 90 |
| | **ಜಿಲ್ಲಾ ವಲಯ ಯೋಜನೆಗಳು** | | | |
| | **ಜಿಲ್ಲಾ ಪಂಚಾಯತ್ ಯೋಜನೆಗಳು** | | | |
| **V** | **ರೇಷ್ಮೆ ಬೆಳೆಗಾರರಿಗೆ ಸಹಾಯ** | | | |
| ಅ) | **ಧನ ಸಹಾಯ/ಪರಿಹಾರ – 2851–00–104–0–30(100)** | | | |
| 1 | ಹಿಪ್ಪುನೇರಳೆ ನರ್ಸರಿಗೆ ಸಹಾಯಧನ (ಪ್ರತಿ ಎಕರೆಗೆ) | 1.500 | 1.125 | 75 |
| 2 | ಹಿಪ್ಪುನೇರಳೆ ನಾಟಿಗೆ ಸಹಾಯಧನ (ಪ್ರತಿ ಎಕರೆಗೆ) | 0.500 | 0.375 | 75 |
| ಆ) &ಇ) | **ವಿಶೇಷ ಘಟಕ ಯೋಜನೆ – 2851–00–104–0–30(422)/ ಗಿರಿಜನ ಉಪ ಯೋಜನೆ – 2851–00–104–0–30(423)** | | | |
| 1 | ಹಿಪ್ಪುನೇರಳೆ ನರ್ಸರಿಗೆ ಸಹಾಯಧನ (ಪ್ರತಿ ಎಕರೆಗೆ) | 1.500 | 1.350 | 90 |
| 2 | ಹಿಪ್ಪುನೇರಳೆ ನಾಟಿಗೆ ಸಹಾಯಧನ (ಪ್ರತಿ ಎಕರೆಗೆ) | 0.500 | 0.450 | 90 |
| | **ತಾಲ್ಲೂಕು ಪಂಚಾಯತ್ ಯೋಜನೆಗಳು** | | | |
| **VI** | **ಉತ್ಪಾದನೆ/ಉತ್ಪಾದಕತೆ ಆಧಾರಿತ ಪ್ರೋತ್ಸಾಹಧನ** | | | |
| | **ಧನ ಸಹಾಯ/ಪರಿಹಾರ – 2851–00–104–0–61(100)** | | | |
| 1 | ಹಿಪ್ಪುನೇರಳೆ ನರ್ಸರಿಗೆ ಸಹಾಯಧನ (ಪ್ರತಿ ಎಕರೆಗೆ) | 1.500 | 1.125 | 75 |
| 2 | ಹಿಪ್ಪುನೇರಳೆ ನಾಟಿಗೆ ಸಹಾಯಧನ (ಪ್ರತಿ ಎಕರೆಗೆ) | 0.500 | 0.375 | 75 |

## ಓದುಗರ ಅನಿಸಿಕೆಗಳಿಗೆ ಆಹ್ವಾನ

**'ರೇಷ್ಮೆ ಕೃಷಿ' ಸಂಚಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಬಗ್ಗೆ ಓದುಗರ ಅನಿಸಿಕೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿದೆ.**
**ನಿಮ್ಮ ಅನಿಸಿಕೆಗಳು, ಸಲಹೆಗಳು ಹಾಗೂ ಸೂಚನೆಗಳು ಸಂಕ್ಷಿಪ್ತವಾಗಿ ಹಾಗೂ ನೇರವಾಗಿ ಇರಲಿ.**
**ಅನಿಸಿಕೆಗಳು, ಸಲಹೆ-ಸೂಚನೆಗಳನ್ನು ಕೆಳಕಂಡ ವಿಳಾಸಕ್ಕೆ ಕಳುಹಿಸುವುದು**

ಪ್ರಧಾನ ಸಂಪಾದಕರು
**ರೇಷ್ಮೆ ಕೃಷಿ**
ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಕಚೇರಿ
5ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು–560 001
ದೂರವಾಣಿ : 080–23123930
**email : teamsilk.tech04av@gmail.com**

## 2023–24ನೇ ಸಾಲಿನಲ್ಲಿ ಕೇಂದ್ರ ರೇಷ್ಮೆ ಮಂಡಳಿಯ ಸಹಯೋಗದೊಂದಿಗೆ ಇಲಾಖೆಯು ಕೇಂದ್ರ ವಲಯ 'ಸಿಲ್ಕ್ ಸಮಗ್ರ' ಯೋಜನೆಯಡಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳ ಹಾಗೂ ಸಹಾಯಧನದ ಅನುಪಾತದ ವಿವರಗಳು(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಕಾರ್ಯಕ್ರಮದ ವಿವರ | ಘಟಕ ದರ | ಸಾಮಾನ್ಯ | | | ವಿಶೇಷ ಘಟಕ ಯೋಜನೆಗಳು | | | ಗಿರಿಜನ ಉಪ ಯೋಜನೆ | | |
|---|---|---|---|---|---|---|---|---|---|---|---|
| | | | ಸಹಾಯ ಧನ | | | ಸಹಾಯ ಧನ | | | ಸಹಾಯ ಧನ | | |
| | | | ಕೇಂದ್ರ (50%) | ರಾಜ್ಯ (25%) | ಒಟ್ಟು (75%) | ಕೇಂದ್ರ (65%) | ರಾಜ್ಯ (25%) | ಒಟ್ಟು (90%) | ಕೇಂದ್ರ (65%) | ರಾಜ್ಯ (25%) | ಒಟ್ಟು (90%) |
| 1 | ರೇಷ್ಮೆ ಹುಳು ಸಾಕಾಣಿಕೆ (ಸುಧಾರಿತ ಮೌಂಟೇಜಸ್‌ಗಳು ಸೇರಿದಂತೆ) ಸಲಕರಣೆಗಳ/ಹಿಪ್ಪುನೇರಳೆ ತೋಟ ನಿರ್ವಹಣಾ ಸಲಕರಣೆಗಳ ಖರೀದಿಗೆ ಸಹಾಯಧನ (ಸಂ) | 0.7500 | 0.3750 | 0.1875 | 0.5625 | 0.4875 | 0.1875 | 0.6750 | 0.4875 | 0.1875 | 0.6750 |
| 2 | ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣ (ಸಂ) | | | | | | | | | | |
| | 1000 ಚ.ಅಡಿ | 4.5000 | 2.2500 | 1.1250 | 3.3750 | 2.9250 | 1.1250 | 4.0500 | 2.9250 | 1.1250 | 4.0500 |
| | 600 ಚ.ಅಡಿ | 3.2500 | 1.6250 | 0.8125 | 2.4375 | 2.1125 | 0.8125 | 2.9250 | 2.1125 | 0.8125 | 2.9250 |
| 3 | ಉತ್ತಮ ಗೂಡು ಉತ್ಪಾದನೆಗೆ ಸೋಂಕು ನಿವಾರಕಗಳ ಸರಬರಾಜು (ಸಂ) | 0.0500 | 0.0250 | 0.0125 | 0.0375 | 0.0325 | 0.0125 | 0.0450 | 0.0325 | 0.0125 | 0.0450 |
| 4 | ನೋಂದಾಯಿತ ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರ ಸ್ಥಾಪನೆ (ಸಂ) | 13.0000 | 6.5000 | 3.2500 | 9.7500 | 8.4500 | 3.2500 | 11.7000 | 8.4500 | 3.2500 | 11.7000 |
| | ಗೂಡಿನ ನಂತರದ ಚಟುವಟಿಕೆಗಳು | | | | | | | | | | |
| 5 | ಮೋಟರೈಸ್ಡ್ ಚರಕಕ್ಕೆ ಸಹಾಯಧನ (ಸಂ) | 0.3000 | 0.1500 | 0.0750 | 0.2250 | 0.1950 | 0.0750 | 0.2700 | 0.1950 | 0.0750 | 0.2700 |
| 6 | ಕಾಟೇಜ್ ಬೇಸಿನ್ ಉನ್ನತೀಕರಣ (ಸಂ) | 2.4000 | 1.2000 | 0.6000 | 1.8000 | 1.5600 | 0.6000 | 2.1600 | 1.5600 | 0.6000 | 2.1600 |
| 7 | ಮಲ್ಟಿ ಎಂಡ್ ರೀಲಿಂಗ್ ಘಟಕ ಅಳವಡಿಕೆ (ಸಂ) | | | | | | | | | | |
| | 10 ಬೇಸಿನ್ | 20.7600 | 10.3800 | 5.1900 | 15.5700 | 13.4940 | 5.1900 | 18.6840 | 13.4940 | 5.1900 | 18.6840 |
| 8 | ಸ್ವಯಂಚಾಲಿತ ರೀಲಿಂಗ್ ಘಟಕ ಸ್ಥಾಪನೆ (ಸಂ) | | | | | | | | | | |
| | 400 ತುದಿಗಳು | 149.6650 | 74.8325 | 37.4163 | 112.2488 | 97.2823 | 37.4163 | 134.6985 | 97.2823 | 37.4163 | 134.6985 |
| | 200 ತುದಿಗಳು | 85.9000 | 42.9500 | 21.4750 | 64.4250 | 55.8350 | 21.4750 | 77.3100 | 55.8350 | 21.4750 | 77.3100 |
| | 120 ತುದಿಗಳು | 39.1500 | 19.5750 | 9.7875 | 29.3625 | 25.4475 | 9.7875 | 35.2350 | 25.4475 | 9.7875 | 35.2350 |
| 9 | ಪ್ಯೂಪ ಪ್ರೋಸೆಸಿಂಗ್ ಘಟಕ ಸ್ಥಾಪನೆ (ಸಂ) | 22.8570 | 11.4285 | 5.7143 | 17.1428 | 14.8571 | 5.7143 | 20.5713 | 14.8571 | 5.7143 | 20.5713 |
| 10 | ರೀಲಿಂಗ್ ಘಟಕಕ್ಕೆ ವಾಟರ್ ರೀ–ಸೈಕ್ಲಿಂಗ್ ಪ್ಲಾಂಟ್ ಸ್ಥಾಪನೆ (ಸಂ) | 18.0000 | 9.0000 | 4.5000 | 13.5000 | 11.7000 | 4.5000 | 16.2000 | 11.7000 | 4.5000 | 16.2000 |

# ರೇಷ್ಮೆ ತರಬೇತಿ ಸಂಸ್ಥೆ ಚನ್ನಪಟ್ಟಣದಲ್ಲಿ ಮಹಿಳೆಯರಿಗೆ ಏರ್ಪಡಿಸಿದ್ದ ಕರಕುಶಲ ತರಬೇತಿ ಕಾರ್ಯಕ್ರಮದ ವರದಿ

ಲೇಖಕರು: ಶ್ರೀ ಆರ್.ಲೋಕೇಶ್, ರೇಷ್ಮೆ ಉಪ ನಿರ್ದೇಶಕರು, ಶ್ರೀಮತಿ ಎಮ್.ಜಿ ರೋಹಿಣಿ ಮತ್ತು ಶ್ರೀ ಪಶುಪತಿ ಗಿರಿ.ಜಿ
ರೇಷ್ಮೆ ಸಹಾಯಕ ನಿರ್ದೇಶಕರು, ರೇಷ್ಮೆ ತರಬೇತಿ ಸಂಸ್ಥೆ. ಚನ್ನಪಟ್ಟಣ, 9449992725

ಗೊಂಬೆನಾಡು ಎಂದು ಪ್ರಸಿದ್ಧವಾದ ರಾಮನಗರ ಜಿಲ್ಲೆಯ ಚನ್ನಪಟ್ಟಣದಲ್ಲಿ ದಿನಾಂಕ 03.07.2023 ರಿಂದ 27.07.2023ರವರೆಗೆ 20 ಕೆಲಸದ ದಿನಗಳ ಅವಧಿಗೆ ಮಹಿಳೆಯರಿಗೆ ಕರಕುಶಲ ತರಬೇತಿ ಕಾರ್ಯಕ್ರಮವನ್ನು ರೇಷ್ಮೆ ತರಬೇತಿ ಸಂಸ್ಥೆ, ಚನ್ನಪಟ್ಟಣದಲ್ಲಿ ಆಯೋಜಿಸಲಾಗಿತ್ತು. ಚನ್ನಪಟ್ಟಣವು ಮರದ ಗೊಂಬೆಗಳ ತಯಾರಿಕೆಗೆ ಪ್ರಸಿದ್ಧಿಯಾದಂತೆ ಚಿಟ್ಟೆ ಕೊರೆದ ಗೂಡುಗಳಿಂದ ಅಲಂಕಾರಿಕ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವ ದಿಕ್ಕಿನಲ್ಲಿ ಸಾಗುವ ರೀತಿ ರೇಷ್ಮೆ ತರಬೇತಿ ಸಂಸ್ಥೆ, ಚನ್ನಪಟ್ಟಣದ ಅಧಿಕಾರಿಗಳು ಕಾರ್ಯಕ್ರಮ ರೂಪಿಸಿರುತ್ತಾರೆ. ಚನ್ನಪಟ್ಟಣ ತಾಲ್ಲೂಕಿನ ಕೆಲವು ಹಳ್ಳಿಗಳು ಮತ್ತು ಚನ್ನಪಟ್ಟಣ ಟೌನ್‌ನಿಂದ 20 ಜನ ಆಸಕ್ತ ಮಹಿಳೆಯರನ್ನು ಆಯ್ಕೆ ಮಾಡಿಕೊಂಡು ಕಳೆದ ಬಾರಿ ತರಬೇತಿ ಪಡೆದ ಶ್ರೀಮತಿ ನಂದಾ, ಚನ್ನಪಟ್ಟಣರವರಿಂದ ತರಬೇತಿ ನೀಡಲಾಯಿತು.

ಮಹಿಳೆಯರು ಅತ್ಯಂತ ಉತ್ಸುಕರಾಗಿ ತರಬೇತಿಯಲ್ಲಿ ಭಾಗವಹಿಸಿ ಚಿಟ್ಟೆ ಕೊರೆದ ಗೂಡುಗಳ ಗುಂಜನ್ನು ಬಿಡಿಸುವುದರಿಂದ ಗೂಡು ಕತ್ತರಿಸುವಿಕೆ, ಬಣ್ಣ ಹಾಕುವಿಕೆ, ಪೋಣಿಸುವ ಕಾರ್ಯಗಳಲ್ಲಿ ಪ್ರತಿಯೊಬ್ಬರೂ ಭಾಗವಹಿಸಿ ಕ್ರಿಯಾತ್ಮಕವಾಗಿ ವಿವಿಧ ರೀತಿಯ ಹಾರಗಳು, ಬೊಕ್ಕೆಗಳು, ವಾಜ್, ಗೊಂಬೆಗಳು, ರಾಕಿಗಳು, ಮೊಗ್ಗಿನ ಜಡೆ, ಕಿವಿಯೋಲೆಗಳು, ಕುತ್ತಿಗೆಗೆ ಹಾಕುವ ಸರಗಳು ಹಾಗೂ ವಿವಿಧ ರೀತಿಯ ಅಲಂಕಾರಿಕ ವಸ್ತುಗಳನ್ನು ತಯಾರಿಸಿರುತ್ತಾರೆ. ಪ್ರಾರಂಭದಲ್ಲಿ ಈ ಗೂಡುಗಳಿಂದ ಏನು ಮಾಡಲು ಸಾಧ್ಯ ಎಂದು ಅನುಮಾನ ವ್ಯಕ್ತಪಡಿಸಿದ ಶಿಬಿರಾರ್ಥಿಗಳ ಮುಖದಲ್ಲಿ ಕೊನೆಯ ದಿನ ತಾವೇ ತಯಾರಿಸಿದ ಅಲಂಕಾರಿಕ ವಸ್ತುಗಳನ್ನು ನೋಡಿದಾಗ ಮಂದಹಾಸ ಮೂಡಿತ್ತು.

ದಿನಾಂಕ 03.07.2023ರಂದು ಪ್ರಾರಂಭದ ದಿನ ಭಾಗವಹಿಸಿದ ಶಿಬಿರಾರ್ಥಿಗಳಿಗೆ ರೇಷ್ಮೆ ಉಪನಿರ್ದೇಶಕರಾದ ಆರ್. ಲೋಕೇಶ್‌ರವರು ರೇಷ್ಮೆ ಇಲಾಖೆಯಿಂದ ನಡೆಸುವ ಈ ಕಾರ್ಯಕ್ರಮ ಮಹಿಳೆಯರ ಸಬಲೀಕರಣದ ಉದ್ದೇಶ ಹೊಂದಿದ್ದು, ಪ್ರತಿಯೊಬ್ಬರೂ ಆಸಕ್ತಿಯಿಂದ ಕಲಿತು ಮಹಿಳೆಯರು ಸ್ವಾವಲಂಬಿಗಳಾಗುವುದರ ಜೊತೆಗೆ ಆರ್ಥಿಕವಾಗಿ





ಸದೃಢರಾಗಲು ಒಂದು ಮಾರ್ಗವಾಗಿದೆ ಎಂದು ತಿಳಿಸಿದರು. ತರಬೇತಿ ನೀಡಿದ ನಂತರ ರೇಷ್ಮೆ ಇಲಾಖೆಯ ರೇಷ್ಮೆ ಬಿತ್ತನೆ ಕೋಠಿಗಳಿಂದ ಶೇ.90ರ ರಿಯಾಯಿತಿ ದರದಲ್ಲಿ ಚಿಟ್ಟೆ ಕೊರೆದ ಗೂಡುಗಳನ್ನು ನೀಡಲಾಗುವುದು. ಇದರಿಂದ ಕಡಿಮೆ ವೆಚ್ಚದಲ್ಲಿ ಹಾರಗಳು ಮತ್ತು ಇತರೆ ವಸ್ತುಗಳನ್ನು ತಯಾರಿಸಿ ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡಬಹುದಾಗಿದ್ದು ಹೆಚ್ಚಿನ ಲಾಭವನ್ನು ಪಡೆಯಲು ಸಹಕಾರಿಯಾಗಿದೆ.

ತರಬೇತಿ ಪಡೆದ ಮಹಿಳೆಯರು ಒಂದು ಸಂಘವನ್ನು ರಚಿಸಿ ನೋಂದಣಿ ಮಾಡಿ ಕೊಂಡು ಮನೆಯಲ್ಲಿಯೇ ಬಿಡುವಿನ ವೇಳೆಯಲ್ಲಿ ಕಾಲಹರಣ ಮಾಡದೇ ಚಿಟ್ಟೆ ಕೊರೆದ ಗೂಡುಗಳಿಂದ ಅಲಂಕಾರಿಕ ವಸ್ತುಗಳನ್ನು ಕಡಿಮೆ ವೆಚ್ಚದಲ್ಲಿ ತಯಾರಿಸಿ ಸಂಘದ ಮೂಲಕ ಹೆಚ್ಚಿನ ದರದಲ್ಲಿ ಮಾರಾಟ ಮಾಡಬಹುದಾಗಿದ್ದು ಜೀವನೋಪಾಯಕ್ಕೆ ಒಂದು ಉತ್ತಮ ಮಾರ್ಗವಾಗಿದೆ ಎಂದು ತಿಳಿಸಿದರು. ತಯಾರಿಸಿದ ಅಲಂಕಾರಿಕ ವಸ್ತುಗಳನ್ನು ಮಾರಾಟ ಮಾಡಲು ಮಾರುಕಟ್ಟೆ






ವ್ಯವಸ್ಥೆಯ ಬಗ್ಗೆ ತಿಳಿಸಿ ಸದರಿ ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಮಾರಾಟ ಮಾಡಲು ವಿಫುಲ ಅವಕಾಶಗಳಿವೆ ಎಂದು ತಿಳಿಸಿಕೊಟ್ಟರು. ಕಾರ್ಯಕ್ರಮದಲ್ಲಿ ರಾಮನಗರ ಜಿಲ್ಲಾ ಪಂಚಾಯತ್ ರೇಷ್ಮೆ ಉಪ ನಿರ್ದೇಶಕರಾದ ಶ್ರೀ ಬಸವರಾಜುರವರು ಭಾಗವಹಿಸಿ ಮಹಿಳೆಯರು ತರಬೇತಿ ಪಡೆದ ನಂತರ ಅಲ್ಲಿಗೇ ನಿಲ್ಲಿಸದೆ ಈ ಕಲೆಯನ್ನು ಮುಂದುವರೆಸಿಕೊಂಡು ಹೋಗಲು ಹಾಗೂ ಇದರಿಂದ ತಮ್ಮ ಜೀವನೋಪಾಯಕ್ಕೆ ದಾರಿ ಮಾಡಿಕೊಳ್ಳಲು ಕರೆ ಕೊಟ್ಟರು.

ದಿನಾಂಕ 28.07.2023ರಂದು ನಡೆದ ಸಮಾರೋಪ ಸಮಾರಂಭದಲ್ಲಿ ಬೆಂಗಳೂರು ವಿಭಾಗದ ರೇಷ್ಮೆ ಜಂಟಿ ನಿರ್ದೇಶಕರಾದ ಶ್ರೀ ವೈ.ಟಿ. ತಿಮ್ಮಯ್ಯರವರು ಭಾಗವಹಿಸಿ ಸರ್ಕಾರದ ವತಿಯಿಂದ ನೀಡುವ ತರಬೇತಿ ಹಾಗೂ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಸ್ವಾವಲಂಬಿಗಳಾಗಿ ಆರ್ಥಿಕ ಮಟ್ಟವನ್ನು ಹೆಚ್ಚಿಸಿಕೊಂಡಾಗ ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ ಎಂದು ಕರೆ ನೀಡಿದರು. ತರಬೇತಿಯನ್ನು ಯಶಸ್ವಿಯಾಗಿ ಮುಗಿಸಿದ ಮಹಿಳಾ ಪ್ರಶಿಕ್ಷಣಾರ್ಥಿಗಳಿಗೆ ಹಾಜರಾತಿ ಪತ್ರಗಳನ್ನು ವಿತರಿಸಿದರು ಹಾಗೂ ಇಲಾಖಾ ಮಟ್ಟದಲ್ಲಿ ದೊರೆಯಬಹುದಾದ ಸವಲತ್ತುಗಳನ್ನು ಕೊಡಿಸಿ ಕೊಡಲು ನಾನು ಸದಾ ಬದ್ಧನಾಗಿರುತ್ತೇನೆ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ರೇಷ್ಮೆ ಮಾದರಿ ಬಿತ್ತನೆ ಕೋಠಿ ಚನ್ನಪಟ್ಟಣ ಇಲ್ಲಿಯ ಉಪ ನಿರ್ದೇಶಕರಾದ ಕೆ.ಎನ್. ರವಿಯವರು ಶಿಬಿರಾರ್ಥಿಗಳು ತಯಾರಿಸಿದ ಅಲಂಕಾರಿಕ ವಸ್ತುಗಳನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮ ಸಂಯೋಜಕರಾದ ಹರೀಶ್ ಬಾಬುರವರು ರೇಷ್ಮೆ ಸಹಾಯಕ ನಿರ್ದೇಶಕರಾದ ಪಶುಪತಿಗಿರಿ ಹಾಗೂ ರೇಷ್ಮೆ ನಿರೀಕ್ಷಕರಾದ ರಾಜಣ್ಣ ಇವರುಗಳು ಭಾಗವಹಿಸಿದ್ದರು.




# ಕೊಪ್ಪಳದಲ್ಲಿ ಜರುಗಿದ ರೇಷ್ಮೆ ಕೃಷಿ ಮೇಳದ ವರದಿ

**ಶ್ರೀಮತಿ ಎಂ.ಎನ್ ಸಂಧ್ಯಾ,** ರೇಷ್ಮೆ ಜಂಟಿ ನಿರ್ದೇಶಕರು, ರೇಷ್ಮೆ ನಿರ್ದೇಶನಾಲಯ, ಮೊ : 72049 26905

ಕೇಂದ್ರ ರೇಷ್ಮೆ ಮಂಡಳಿಯ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಮೈಸೂರು ಹಾಗೂ ಕರ್ನಾಟಕ ಸರ್ಕಾರದ ರೇಷ್ಮೆ ಇಲಾಖೆಯ ಸಹಯೋಗದಲ್ಲಿ ದಿನಾಂಕ:27-07-2023 ರಂದು ಕೊಪ್ಪಳದ 'ಶ್ರೀ ಶಿವಶಾಂತ ಮಂಗಲ ಭವನ'ದಲ್ಲಿ ರೇಷ್ಮೆ ಕೃಷಿ ಮೇಳ ಹಾಗೂ ರೇಷ್ಮೆ ಕೃಷಿ ವಸ್ತು ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು.

ಶ್ರೀಮತಿ ಹೇಮಲತಾ ನಾಯಕ, ಮಾನ್ಯ ಶಾಸಕರು, ವಿಧಾನ ಪರಿಷತ್, ಕೊಪ್ಪಳರವರು ರೇಷ್ಮೆ ಕೃಷಿ ವಸ್ತು ಪ್ರದರ್ಶನವನ್ನು ಉದ್ಘಾಟಿಸಿದರು, ಹಿಪ್ಪುನೇರಳೆಯ ವಿವಿಧ ತಳಿಗಳು, ಮಣ್ಣು ಪರೀಕ್ಷೆ ವಿಧಾನ, ವಿವಿಧ ತಳಿಗಳ ರೇಷ್ಮೆ ಗೂಡುಗಳು, ಹಿಪ್ಪುನೇರಳೆ ಹಾಗೂ ರೇಷ್ಮೆ ಹುಳುಗಳಿಗೆ ತಗಲುವ ಕೀಟಗಳು ಮತ್ತು ರೋಗಗಳ ನಿರ್ವಹಣಾ ಕ್ರಮಗಳು, ಜೈವಿಕ ಹತೋಟಿ ಕ್ರಮಗಳು, ವಿವಿಧ ಯಂತ್ರೋಪಕರಣಗಳು, ಸೋಂಕು ನಿವಾರಕಗಳು, ಚಿಟ್ಟೆ ಕೊರೆದ ಗೂಡುಗಳಿಂದ ಸಿದ್ಧಪಡಿಸಿದ ಕರಕುಶಲ ವಸ್ತುಗಳು ಮುಂತಾದವುಗಳನ್ನು ಪ್ರದರ್ಶಿಸಲಾಗಿತ್ತು,

'ರೇಷ್ಮೆ ಕೃಷಿಯ ಗುರಿ-ಸಮೃದ್ಧಿಗೆ ದಾರಿ' ವಿಷಯದ ಬಗ್ಗೆ ಏರ್ಪಡಿಸಿದ್ದ ರೇಷ್ಮೆ ಕೃಷಿ ಮೇಳವನ್ನು ಕೊಪ್ಪಳದ ನಗರ ಸಭೆಯ ಅಧ್ಯಕ್ಷರಾದ ಶ್ರೀಮತಿ ಶಿವಗಂಗಾ ಶಿವರೆಡ್ಡಿಯವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು,

ಶಾಲಾ ಮಕ್ಕಳ ಪ್ರಾರ್ಥನೆ, ನಾಡಗೀತೆ ಹಾಗೂ ರೈತಗೀತೆಗಳ ನಂತರ, ಡಾ. ಗಾಂಧಿ ದಾಸ್, ನಿರ್ದೇಶಕರು, ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಮೈಸೂರು ಇವರು ಕಾರ್ಯಕ್ರಮಕ್ಕೆ ಆಗಮಿಸಿದ್ದ ಗಣ್ಯರನ್ನು ಹಾಗೂ ರೇಷ್ಮೆ ಬೆಳೆಗಾರರನ್ನು ಸ್ವಾಗತಿಸಿದರು.

ಶ್ರೀಮತಿ ಎಂ.ಎನ್ ಸಂಧ್ಯಾ, ರೇಷ್ಮೆ ಜಂಟಿ ನಿರ್ದೇಶಕರು (ಯೋಜನೆ), ರೇಷ್ಮೆ ನಿರ್ದೇಶನಾಲಯರವರು ಪ್ರಾಸ್ತಾವಿಕ ಭಾಷಣದಲ್ಲಿ, 2022-23ನೇ ಸಾಲಿನಲ್ಲಿ ಭಾರತದ ಒಟ್ಟು ಹಿಪ್ಪುನೇರಳೆ ರೇಷ್ಮೆ ಉತ್ಪಾದನೆ 27,630 ಮೆ.ಟನ್‌ಗಳಾಗಿದ್ದು, ಕರ್ನಾಟಕವು 11,823 ಮೆ.ಟನ್ ರೇಷ್ಮೆ ಉತ್ಪಾದಿಸಿ ಅಗ್ರಸ್ಥಾನದಲ್ಲಿರುವುದಾಗಿ ತಿಳಿಸಿದರು, ರಾಜ್ಯದಲ್ಲಿ ಒಟ್ಟು 1.13 ಲಕ್ಷ ಹಿಪ್ಪುನೇರಳೆ ವಿಸ್ತೀರ್ಣವಿದ್ದು, 1.44 ಲಕ್ಷ ರೇಷ್ಮೆ ಬೆಳೆಗಾರರು ಹಾಗೂ 7269 ರೇಷ್ಮೆ ನೂಲು ಬಿಚ್ಚಾಣಿಕೆ ದಾರರಿದ್ದಾರೆ. ರೇಷ್ಮೆ ಕೃಷಿಯು ಮೊದಲಿಗೆ ದಕ್ಷಿಣ ಕರ್ನಾಟಕ ಜಿಲ್ಲೆಗಳಲ್ಲಿ ಜನಪ್ರಿಯವಾಗಿದ್ದು, ಇತ್ತೀಚೆಗೆ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿಯೂ ರೈತರಿಗೆ 'ಅಲ್ಪ ಅವಧಿಯಲ್ಲಿ ಅಧಿಕ ಲಾಭ' ತರುವ ಕಸುಬಾಗಿದೆ, ಕೊಪ್ಪಳ ಜಿಲ್ಲೆಯಲ್ಲಿ 627 ಹೆಕ್ಟೇರ್‌ಗಳಲ್ಲಿ ಹಿಪ್ಪುನೇರಳೆ ಬೆಳೆಯುತ್ತಿದ್ದು, 768 ರೇಷ್ಮೆ ಬೆಳೆಗಾರರಿದ್ದಾರೆ. ರೇಷ್ಮೆ ಇಲಾಖೆಯ ಮೂಲಕ ಕೇಂದ್ರ ಹಾಗೂ ರಾಜ್ಯ ವಲಯದ ವಿವಿಧ ಯೋಜನೆಗಳಡಿ, ರೇಷ್ಮೆ ಬೆಳೆಗಾರರಿಗೆ, ರೇಷ್ಮೆ ನೂಲು ಉತ್ಪಾದಕರಿಗೆ ಸಹಾಯಧನ: ಪ್ರೋತ್ಸಾಹಧನಗಳನ್ನು ಒದಗಿಸಲಾಗುತ್ತಿದೆ. ರೇಷ್ಮೆ ಬೆಳೆಗಾರರು ಉತ್ಪಾದಿಸಿದ ರೇಷ್ಮೆ ಗೂಡುಗಳಿಗೆ ಉತ್ತಮ ದರ ದೊರೆಯಲು ಹಾಗೂ ಪಾರದರ್ಶಕ ವಹಿವಾಟಿಗಾಗಿ ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ಇ-ಹರಾಜು ವ್ಯವಸ್ಥೆ ಹಾಗೂ ಇ-ಹಣ ಪಾವತಿ ಅನುಷ್ಠಾನಗೊಳಿಸಲಾಗಿದ್ದು, ರೇಷ್ಮೆ ಗೂಡುಗಳ ಮಾರಾಟದ ಮೊತ್ತ ರೈತರ ಬ್ಯಾಂಕ್ ಖಾತೆಗಳಿಗೆ ಜಮಾ ಆಗುತ್ತಿದೆಯೆಂದು ತಿಳಿಸಿದರು,





2023-24ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಇನ್ನೂ ಹೆಚ್ಚು ರೈತರು ರೇಷ್ಮೆ ಕೃಷಿ ಕೈಗೊಂಡು, ರೇಷ್ಮೆ ಗೂಡುಗಳ ಉತ್ಪಾದನೆ ಹೆಚ್ಚಿಸಲು ಸಲಹೆ ನೀಡಿದರು, ಸ್ಥಳೀಯವಾಗಿ ಬೆಳೆದ ರೇಷ್ಮೆ ಗೂಡುಗಳ ಬಳಕೆ ಮತ್ತು ಅಂತರಾಷ್ಟ್ರೀಯ ಗುಣಮಟ್ಟದ ರೇಷ್ಮೆ ಉತ್ಪಾದನೆಗಾಗಿ ಕೊಪ್ಪಳ ಜಿಲ್ಲೆಯಲ್ಲಿ ಒಂದು ಸ್ವಯಂಚಾಲಿತ ರೇಷ್ಮೆ ನೂಲು ಬಿಚ್ಚಾಣಿಕೆ ಘಟಕ ಸ್ಥಾಪನೆಯಾಗಬೇಕೆಂದು ಆಶಿಸಿದರು.

ಕೇಂದ್ರ ರೇಷ್ಮೆ ಮಂಡಳಿಯ ಡಿ.ಎಸ್.ಟಿ.ಎಸ್.ಸಿ ರಾಯಪುರದ ವಿಜ್ಞಾನಿ ಡಾ॥ ಉದಯ್ ಸಿ, ಜವಳಿರವರು ಸಂಸ್ಥೆಯ ಮೂಲಕ ನೀಡಲಾಗುತ್ತಿರುವ ತರಬೇತಿ, ಇತರ ಸೌಲಭ್ಯಗಳ ಬಗ್ಗೆ ವಿವರಿಸಿದರು, ಕಲಬುರಗಿ ವಿಭಾಗದ ಪ್ರಭಾರಿ ರೇಷ್ಮೆ ಜಂಟಿ ನಿರ್ದೇಶಕರಾದ ಶ್ರೀ



ನಾಗಪ್ಪ ಬಿರಾದರರವರು ಸಂಶೋಧನಾ ಸಂಸ್ಥೆಗಳಲ್ಲಿ ಅಭಿವೃದ್ಧಿ ಪಡಿಸಿದ ತಂತ್ರಜ್ಞಾನಗಳನ್ನು ಹಿಪ್ಪುನೇರಳೆ ಕೃಷಿ ಹಾಗೂ ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಅಳವಡಿಸಿಕೊಂಡು, ಗುಣಮಟ್ಟದ ರೇಷ್ಮೆ ಗೂಡುಗಳ ಉತ್ಪಾದನೆಗೆ ಆದ್ಯತೆ ನೀಡುವಂತೆ ತಿಳಿಸಿದರು.

ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ವಿಜ್ಞಾನಿಗಳೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಸದರಿ ರೇಷ್ಮೆ ಕೃಷಿ ಮೇಳದಲ್ಲಿ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ವಿಜ್ಞಾನಿಗಳು ಹಾಗೂ ರೇಷ್ಮೆ ನಿರ್ದೇಶನಾಲಯದ ಶ್ರೀಮತಿ ವಿಜಯಕುಮಾರಿ ರೇಷ್ಮೆ ಜಂಟಿ ನಿರ್ದೇಶಕರು (ಪ್ರ), ರೇಷ್ಮೆ ನಿರ್ದೇಶನಾಲಯ, ಶ್ರೀ ಅಂಜನಾಮೂರ್ತಿ, ರೇಷ್ಮೆ ಉಪನಿರ್ದೇಶಕರು(ಜಿ.ಪಂ) ಕೊಪ್ಪಳ, ಶ್ರೀ ಸುಧೀರ್, ರೇಷ್ಮೆ ಉಪನಿರ್ದೇಶಕರು (ಜಿ.ಪಂ) ಬಳ್ಳಾರಿ, ಶ್ರೀ ರಾಜೇಂದ್ರ ಕುಮಾರ್, ರೇಷ್ಮೆ




ಉಪನಿರ್ದೇಶಕರು (ಪ್ರ)(ಜಿ.ಪಂ) ರಾಯಚೂರು, ಮುಂತಾದವರು ಉಪಸ್ಥಿತರಿದ್ದರು. ವಂದನೆಗಳೊಂದಿಗೆ ರೇಷ್ಮೆ ಕೃಷಿ ಮೇಳವನ್ನು ಮುಕ್ತಾಯಗೊಳಿಸಲಾಯಿತು.



ಶ್ರೀ ಕೆ. ವೆಂಕಟೇಶ್, ಮಾನ್ಯ ಪಶು ಸಂಗೋಪನಾ ಮತ್ತು ರೇಷ್ಮೆ ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಿಂದ 'ರೇಷ್ಮೆ ಕೃಷಿಯಲ್ಲಿ ಮರಗಡ್ಡಿ ಬೇಸಾಯದ ಕರಪತ್ರ' ಬಿಡುಗಡೆ ಸಂದರ್ಭ

# ಸ್ಯಾನಿಟಾಲ್ ಪ್ಲಸ್

## ರೇಷ್ಮೆಹುಳು ಸಾಕಾಣಿಕಾ ಮನೆ ಮತ್ತು ಸಲಕರಣೆಗಳಿಗೆ ಕ್ಲೋರಿನ್ ಆಧಾರಿತ ಸೋಂಕು ನಿವಾರಕ

ಸಂಗ್ರಹ : ಕೆಎಸ್ಎಸ್ಆರ್‌ಡಿಐ, ತಲಘಟ್ಟಪುರ ಇವರ ತಾಂತ್ರಿಕತೆ






### ತಾಂತ್ರಿಕತೆಯ ವಿವರ

- ಸ್ಯಾನಿಟಾಲ್ ಪ್ಲಸ್ ಕ್ಲೋರಿನ್ ಆಧಾರಿತ, ಸ್ಥಿರ ಕ್ಲೋರಿನ್ ಡೈ ಆಕ್ಸೈಡ್, ಆಕ್ಟಿವೇಟರ್ ಮತ್ತು ಬೂಸ್ಟರ್ ಮೂರು ವಿವಿಧ ರಾಸಾಯನಿಕಗಳ ಮಿಶ್ರಣವುಳ್ಳ ಪರಿಣಾಮಕಾರಿ ಸೋಂಕು ನಿವಾರಕ, ಬಳಕೆದಾರ ಸ್ನೇಹಿ.
- ಈ ಸೋಂಕು ನಿವಾರಕವು ರೇಷ್ಮೆ ಹುಳುವಿಗೆ ತಗಲುವ ಹಾಲು, ಕೆಂಚು, ಸಪ್ಪೆ, ಗಂಟು, ಬಿಳಿ ಸುಣ್ಣಕಟ್ಟು, ಹಸಿರು ಸುಣ್ಣಕಟ್ಟು ಮತ್ತು ಆಸ್ಪರ್ ಜಿಲ್ಲೋಸಿಸ್ ರೋಗಕ್ಕೆ ಕಾರಣವಾದ ರೋಗಾಣುಗಳನ್ನು ಪರಿಣಾಮಕಾರಿಯಾಗಿ ನಿಷ್ಕ್ರಿಯಗೊಳಿಸಬಲ್ಲದು.
- ಸ್ಯಾನಿಟಾಲ್ ಪ್ಲಸ್ ದ್ರವ ರೂಪದ ಸಂಪರ್ಕ ಸೋಂಕು ನಿವಾರಕ ವಾಗಿದ್ದು, ನೀರಿನಲ್ಲಿ ಸಂಪೂರ್ಣ ಮಿಶ್ರಣವಾಗಿ, ತಕ್ಷಣವೇ ಬಳಸಬಹುದು. ಇದು ಎಲ್ಲಾ ರೀತಿಯ ಹುಳು ಸಾಕಾಣಿಕೆ ಮನೆಗಳಲ್ಲಿ, ಎಲ್ಲಾ ಋತುಮಾನಗಳಲ್ಲಿಯೂ ಬಳಸಲು ಸೂಕ್ತ.
- ಸ್ಯಾನಿಟಾಲ್ ಪ್ಲಸ್‌ನ ಸಾಂದ್ರತೆ 7.5–8, ಶೇಖರಣಾ ಅವಧಿ 1 ವರ್ಷ, ಕರಗುವ ಪ್ರಮಾಣ 1:40 (1 ಲೀ. ಸ್ಯಾನಿಟಾಲ್ ಪ್ಲಸ್‌ಗೆ 40 ಲೀ. ನೀರು).
- **ಖರ್ಚು ಲಾಭದ ಅನುಪಾತ:** ಸ್ಯಾನಿಟಾಲ್ ಪ್ಲಸ್ ಉಪಯೋಗ ದಿಂದ ಪ್ರತೀ ನೂರು ಮೊಟ್ಟೆಗೆ 10 ಕೆ.ಜಿ. ಅಧಿಕ ರೇಷ್ಮೆ ಗೂಡಿನ ಇಳುವರಿಯನ್ನು ಪಡೆಯಬಹುದು ಇದರ ಖರ್ಚು ಮತ್ತು ಲಾಭದ ಅನುಪಾತ 1:16.

### ಸ್ಯಾನಿಟಾಲ್ ಪ್ಲಸ್‌ತಯಾರಿಸುವ ಮತ್ತು ಉಪಯೋಗಿಸುವ ವಿಧಾನ

- ಪ್ರತಿ ಬೆಳೆಯ ನಂತರ, ಸಾಕಣೆ ಮನೆಯ ನೆಲ ಹಾಗೂ ಹಾಸಿಗೆ ಯಲ್ಲಿನ ಒಣ ಕಸವನ್ನು ತೆಗೆದು ಗುಂಡಿಯಲ್ಲಿ ಹಾಕಿ, ಮಣ್ಣು ಮುಚ್ಚಿ, ಕಳಿಯಲು ಬಿಡಬೇಕು.
- ಸುಮಾರು 50 ಲೀ. ಸಾಮರ್ಥ್ಯವಿರುವ ಡ್ರಮ್‌ನಲ್ಲಿ ಮೊದಲು 100 ಗ್ರಾಂ ಆಕ್ಟಿವೇಟರ್ ಹರಳುಗಳನ್ನು ಹಾಕಿ ಇದಕ್ಕೆ ಸ್ಥಿರೀಕರಿಸಿದ ಒಂದು ಲೀ. ಕ್ಲೋರಿನ್ ಡೈ ಆಕ್ಸೈಡ್ ಬೆರೆಸಬೇಕು. ನಂತರ 1–2 ನಿಮಿಷದಲ್ಲಿ 40ಲೀ. ನೀರನ್ನು ಹಾಕಿ ಕೋಲಿನಿಂದ ತಿರುಗಿಸುತ್ತಾ, ಅದಕ್ಕೆ 500 ಮಿ.ಲೀ. ಬೂಸ್ಟರ್ ಬೆರೆಸಿ ಮಿಶ್ರಣ ಮಾಡಬೇಕು. ತಯಾರಿಸಿದ ದ್ರಾವಣವನ್ನು 1.5 ಲೀ./ಚದರ ಮೀಟರ್‌ನಂತೆ ಮನೆಯ ನೆಲ, ಗೋಡೆ, ಚಾವಣಿ, ಸಾಕಾಣಿಕಾ ಸಾಮಗ್ರಿಗಳಿಗೆ ಪೂರ್ಣವಾಗಿ ಒದ್ದೆಯಾಗುವಂತೆ ಸಿಂಪಡಿಸಬೇಕು. ಸುಮಾರು 10–12 ಗಂಟೆಗಳ ನಂತರ ಸಲಕರಣೆಗಳನ್ನು ಹೊರತೆಗೆದು, ನೀರಿನಿಂದ ತೊಳೆದು, ಬಿಸಿಲಿನಲ್ಲಿ 8–10 ಗಂಟೆಗಳ ಕಾಲ ಚೆನ್ನಾಗಿ ಒಣಗಿಸಬೇಕು. ಈ ವೇಳೆಯಲ್ಲಿ ಮನೆಯ ನೆಲವನ್ನು ಉಜ್ಜಿ, ನೀರಿನಲ್ಲಿ ಸ್ವಚ್ಛಗೊಳಿಸಿ ನಂತರ ಬಿಸಿಲಿನಲ್ಲಿ ಒಣಗಿದ ಎಲ್ಲಾ ಸಲಕರಣೆಗಳನ್ನು ಹುಳು ಸಾಕುವ ಮನೆಯೊಳಗೆ ಇಟ್ಟುಕೊಳ್ಳಬೇಕು.
- ಚಾಕಿಮಾಡುವ ಒಂದು ದಿನ ಮೊದಲು ಮೇಲೆ ತಿಳಿಸಿದಂತೆ ಮತ್ತೊಮ್ಮೆ ಸೋಂಕು ನಿವಾರಣೆ ಮಾಡಬೇಕು.
- **ರೋಗಗ್ರಸ್ಥ/ಸತ್ತ ಹುಳುಗಳ ನಾಶಪಡಿಸುವಿಕೆ:** ಸ್ಯಾನಿಟಾಲ್ ಪ್ಲಸ್ (25 ಮಿ.ಲೀ./ ಲೀಟರ್ ನೀರಿನಲ್ಲಿ) ಹಾಕಿ ತಯಾರಿಸಿದ ದ್ರಾವಣದಲ್ಲಿ ರೋಗಗ್ರಸ್ತ/ಸತ್ತ ಹುಳುಗಳನ್ನು ಹಾಕಿ ನಂತರ ನಾಶ ಪಡಿಸಬೇಕು.
- **ಸೋಂಕು ನಿವಾರಣಾ ತೊಟ್ಟಿ:** ಸಲಕರಣೆಗಳನ್ನು 1:40 ಪ್ರಮಾಣ ದಲ್ಲಿ ತಯಾರಿಸಿದ ಸ್ಯಾನಿಟಾಲ್ ಪ್ಲಸ್ ದ್ರಾವಣದಲ್ಲಿ ಅರ್ಧ ಗಂಟೆ ಕಾಲ ತೊಟ್ಟಿಯಲ್ಲಿ ಅದ್ದಿ, ಹೊರ ತೆಗೆದು ಬಿಸಿಲಿನಲ್ಲಿ ಒಣಗಿಸಿ ನಂತರ ಉಪಯೋಗಿಸುವುದು.

# ಸಂಜೀವಿನಿ

## ರೇಷ್ಮೆ ಹುಳುಗಳಲ್ಲಿ ಹಾಲು, ಕೆಂಚು ಮತ್ತು ಸಪ್ಪೆರೋಗ ತಡೆಗಟ್ಟಲು ಹಾಸಿಗೆ ಸೋಂಕು ನಿವಾರಣೆ

ಸಂಗ್ರಹ : ಕೆಎಸ್‌ಎಸ್‌ಆರ್‌ಡಿಐ, ತಲಘಟ್ಟಪುರ ಇವರ ತಾಂತ್ರಿಕತೆ

### ತಾಂತ್ರಿಕತೆಯ ವಿವರ

❖ ಸಂಜೀವಿನಿ ಹಾಸು ಸೋಂಕು ನಿವಾರಕವು ರಾಸಾಯನಿಕ ಮಿಶ್ರಣವಾಗಿದ್ದು, ಸಾಕಾಣಿಕೆ ಸಮಯದಲ್ಲಿ ಉಪಯೋಗಿಸಿದರೆ ರೇಷ್ಮೆ ಹುಳುಗಳಿಗೆ ವೈರಸ್‌ನಿಂದ ಬರುವ ಹಾಲು ರೋಗ ಮತ್ತು ಕೆಂಚು ರೋಗ ಹಾಗೂ ಬ್ಯಾಕ್ಟೀರಿಯಾದಿಂದ ಬರುವ ಸಪ್ಪೆ ರೋಗವನ್ನು ತಡೆಗಟ್ಟಲು ಬೇಸಿಗೆ ಮತ್ತು ಮಳೆಗಾಲಕ್ಕೆ ಶಿಫಾರಸ್ಸು ಮಾಡಲಾಗಿದೆ.

❖ ಸಂಜೀವಿನಿ ಹಾಸು ಸೋಂಕು ನಿವಾರಕವು ರೈತರಿಗೆ ಬಳಸಲು ಸರಳ ಮತ್ತು ಸುಲಭ ವಿಧಾನವಾಗಿದ್ದು, ಆರ್ಥಿಕವಾಗಿ ಲಾಭದಾಯಕವಾಗಿದೆ.

❖ ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಸಂಜೀವಿನಿಯನ್ನು ಬಳಸುವುದರಿಂದ ಹಾಸಿಗೆಯಲ್ಲಿ ರೋಗಾಣುಗಳ ಸಂತತಿ ಕಡಿಮೆಗೊಳಿಸಿ ಗೂಡಿನ ಇಳುವರಿ ಹಾಗೂ ಗುಣಮಟ್ಟ ಹೆಚ್ಚಿಸುತ್ತದೆ.

❖ ನೂರು ಮೊಟ್ಟೆಗಳ ಒಂದು ಬೆಳೆಗೆ (50,000 ಹುಳುಗಳು) ಬೇಕಾಗುವ ಸಂಜೀವಿನಿ ಪ್ರಮಾಣ ತಟ್ಟೆ ಪದ್ಧತಿಗೆ 4.0 ಕೆ.ಜಿ. ಮತ್ತು ರೆಂಬೆ ಪದ್ಧತಿ ಸಾಕಾಣಿಕೆಗೆ 6.0 ಕೆ.ಜಿ.

❖ ಸಂಜೀವಿನಿಯನ್ನು ತಯಾರಿಸಿದ ದಿನಾಂಕದಿಂದ ಒಂದು ವರ್ಷದೊಳಗೆ ಉಪಯೋಗಿಸಬೇಕು. ರೈತರ ವಿತರಣೆಗೆ ಸಂಜೀವಿನಿ ಖರೀದಿ ಪ್ರಕ್ರಿಯೆಯನ್ನು ಶಿಫಾರಸ್ಸು ಮಾಡಿದ ಋತುಮಾನಕ್ಕಿಂತ ಮೊದಲೇ ಪ್ರಾರಂಭಿಸಬೇಕು.

❖ **ಖರ್ಚು ಲಾಭದ ಅನುಪಾತ:** ಸಂಜೀವಿನಿ ಉಪಯೋಗದಿಂದ ಪ್ರತೀ ನೂರು ಮೊಟ್ಟೆಗೆ 6–8 ಕೆ.ಜಿ. ಅಧಿಕ ರೇಷ್ಮೆಗೂಡಿನ ಇಳುವರಿಯನ್ನು ಪಡೆಯಬಹುದು ಇದರ ಖರ್ಚು ಮತ್ತು ಲಾಭದ ಅನುಪಾತ 1:6.

### ಸಂಜೀವಿನಿಯನ್ನು ಉಪಯೋಗಿಸುವ ವಿಧಾನ

❖ ಸಂಜೀವಿನಿಯನ್ನು ತೆಳುವಾದ ಬಟ್ಟೆಯಲ್ಲಿ ಅಥವಾ 2–3 ಪದರ ಮಾಡಿದ ಊಜಿ ನೆಟ್ ತೆಗೆದುಕೊಂಡು, ಚಾಕಿ ಕಟ್ಟುವ ಮೊದಲು ಮೇಣದ ಕಾಗದ ಹಾಕಿದ ಖಾಲಿ ತಟ್ಟೆಗಳಿಗೆ, ನಂತರ ಹುಳುಗಳ




ಮೇಲೆ ತೆಳುವಾಗಿ ಧೂಳೀಕರಿಸಿ, ಅರ್ಧ ಗಂಟೆಯ ನಂತರ ಸೊಪ್ಪನ್ನು ಕೊಡಬೇಕು.

❖ ಪ್ರತಿ ಹಂತದಲ್ಲೂ ಹುಳುಗಳು ಜ್ವರದಿಂದ ಎದ್ದ ಮೇಲೆ ಸೊಪ್ಪು ಕೊಡುವ ಮೊದಲು ಧೂಳೀಕರಿಸಬೇಕು.

❖ 5ನೇ ಹಂತದ ಹುಳುಗಳಿಗೆ 3ನೇ ಮತ್ತು 5ನೇ ದಿನ ಹಾಸಿಗೆಯಲ್ಲಿನ ಕಸ ತೆಗೆದ ನಂತರ ಅಥವಾ ಹುಳುಗಳು ಸೊಪ್ಪನ್ನು ಪೂರ್ಣ ತಿಂದ ನಂತರ ಅಥವಾ ಹಾಸಿಗೆಯನ್ನು ಅಗಲಿಸಿದ ನಂತರ ಸಂಜೀವಿನಿಯನ್ನು ಧೂಳೀಕರಿಸಿ ಅರ್ಧ ಗಂಟೆಯ ನಂತರ ಸೊಪ್ಪನ್ನು ಕೊಡಬೇಕು.

❖ ಹುಳುಗಳು ಹಣ್ಣಾಗುವ ಹಂತದಲ್ಲಿ ಸಂರಕ್ಷಕ ಧೂಳೀಕರಿಸುವುದರಿಂದ ಚಂದ್ರಿಕೆಯಲ್ಲಿ ಹುಳುಗಳು ರೋಗದಿಂದ ಸಾವನ್ನಪ್ಪುವುದನ್ನು ತಡೆಯಬಹುದು.

**ಕೋಷ್ಟಕ : ಬೇಕಾಗುವ ಸಂಜೀವಿನಿ ಪ್ರಮಾಣ 100 ಮೊಟ್ಟೆಗಳ ಒಂದು ಬೆಳೆಗೆ**

| ಸಾಕಾಣಿಕೆ ವಿಧಾನ | ಖಾಲಿ ತಟ್ಟೆಗೆ (ಗ್ರಾಂ) | 1ನೇ ಜ್ವರದ ನಂತರ (ಗ್ರಾಂ) | 2ನೇ ಜ್ವರದ ನಂತರ (ಗ್ರಾಂ) | 3ನೇ ಜ್ವರದ ನಂತರ (ಗ್ರಾಂ) | 4ನೇ ಜ್ವರದ ನಂತರ (ಗ್ರಾಂ) | 5ನೇ ಹಂತದ 3ನೇ ದಿನ (ಗ್ರಾಂ) | 5ನೇ ಹಂತದ 5ನೇ ದಿನ (ಗ್ರಾಂ) | ಒಟ್ಟು ಪ್ರಮಾಣ (ಗ್ರಾಂ) |
|---|---|---|---|---|---|---|---|---|
| ತಟ್ಟೆ ಪದ್ಧತಿ | 20 | 50 | 150 | 300 | 600 | 1280 | 1600 | 4000 |
| ರೆಂಬೆ ಪದ್ಧತಿ | 20 | 50 | 150 | 550 | 1000 | 1850 | 2380 | 6000 |

## ರೇಷ್ಮೆಗೂಡಿನ ವಹಿವಾಟು ಹಾಗೂ ಧಾರಣೆ ವಿವರ

| ಕ್ರ.ಸಂ | ಪ್ರಮುಖ ರೇಷ್ಮೆ ಗೂಡು ಮಾರುಕಟ್ಟೆಗಳು | | ಮೇ-2023 | | | | ಜೂನ್-2023 | | | |
|---|---|---|---|---|---|---|---|---|---|---|
| | | | ವಹಿವಾಟಾದ ಪ್ರಮಾಣ (ಮೆ.ಟನ್) | ಗೂಡಿನ ಧಾರಣೆ ರೂಗಳಲ್ಲಿ (ಕೆ.ಜಿ.) | | | ವಹಿ ವಾಟಾದ ಪ್ರಮಾಣ (ಮೆ.ಟನ್) | ಗೂಡಿನ ಧಾರಣೆ ರೂಗಳಲ್ಲಿ (ಕೆ.ಜಿ.) | | |
| | | | | ಕನಿಷ್ಠ | ಗರಿಷ್ಠ | ಸರಾಸರಿ | | ಕನಿಷ್ಠ | ಗರಿಷ್ಠ | ಸರಾಸರಿ |
| 1 | ಶಿಡ್ಲಘಟ್ಟ (ಮಿಶ್ರತಳಿ) | | 874.536 | 105 | 613 | 388 | 834.582 | 105 | 600 | 392 |
| 2. | ರಾಮನಗರ | ಮಿಶ್ರತಳಿ | 338.840 | 100 | 547 | 332 | 301.996 | 200 | 520 | 371 |
| | | ದ್ವಿತಳಿ | 918.621 | 100 | 707 | 450 | 786.441 | 187 | 926 | 476 |
| 3 | ಕೊಳ್ಳೇಗಾಲ (ಮಿಶ್ರತಳಿ) | | 416.052 | 200 | 570 | 381 | 368.776 | 200 | 541 | 415 |
| 4 | ವಿಜಯಪುರ (ಮಿಶ್ರತಳಿ) | | 138.256 | 133 | 555 | 388 | 121.509 | 183 | 503 | 387 |
| 5 | ಕನಕಪುರ (ಮಿಶ್ರತಳಿ) | | 466.839 | 250 | 540 | 317 | 396.005 | 215 | 471 | 335 |
| 6 | ಕೋಲಾರ | ಮಿಶ್ರತಳಿ | 67.246 | 170 | 521 | 365 | 69.749 | 160 | 537 | 365 |
| | | ದ್ವಿತಳಿ | 171.596 | 182 | 589 | 429 | 143.717 | 220 | 604 | 446 |
| 7 | ಚಿಂತಾಮಣಿ (ಮಿಶ್ರತಳಿ) | | 80.500 | 170 | 549 | 383 | 73.650 | 175 | 475 | 370 |
| 8 | ಶ್ರೀನಿವಾಸಪುರ (ಮಿಶ್ರತಳಿ) | | 84.344 | 200 | 550 | 386 | 68.530 | 192 | 470 | 373 |
| 9 | ಚನ್ನಪಟ್ಟಣ (ಮಿಶ್ರತಳಿ) | | 56.995 | 200 | 672 | 394 | 69.146 | 150 | 432 | 344 |
| 10 | ಚಿಕ್ಕಬಳ್ಳಾಪುರ (ಮಿಶ್ರತಳಿ) | | 24.975 | 165 | 520 | 397 | 26.694 | 220 | 470 | 390 |
| 11 | ಶಿರಹಟ್ಟಿ | ದ್ವಿತಳಿ | 14.206 | 100 | 550 | 375 | 9.906 | 100 | 430 | 319 |
| 12 | ಹಾವೇರಿ | ದ್ವಿತಳಿ | 4.039 | 231 | 485 | 389 | 4.994 | 181 | 526 | 348 |
| 13 | ಇತರೆ ಮಾರುಕಟ್ಟೆ | | 479.474 | | | | 418.785 | | | |
| | ಒಟ್ಟು | | **4136.519** | | | | **3694.480** | | | |

## ರಾಜ್ಯದ ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ವಹಿವಾಟಾದ ರೇಷ್ಮೆ ಪ್ರಮಾಣ ಮತ್ತು ಧಾರಣೆ ವಿವರ

| ಕಚ್ಚಾ ರೇಷ್ಮೆ | ಮೇ 2023 | | | ಜೂನ್ 2023 | | |
|---|---|---|---|---|---|---|
| | ಪ್ರಮಾಣ (ಟನ್‌ಗಳಲ್ಲಿ) | ಮೌಲ್ಯ (ಲಕ್ಷಗಳಲ್ಲಿ) | ಸರಾಸರಿ ದರ (ರೂ/ಕೆ.ಜಿ) | ಪ್ರಮಾಣ (ಟನ್‌ಗಳಲ್ಲಿ) | ಮೌಲ್ಯ (ಲಕ್ಷಗಳಲ್ಲಿ) | ಸರಾಸರಿ ದರ (ರೂ/ಕೆ.ಜಿ) |
| ಫಿಲೇಚರ್ | 3.084 | 131.918 | 4277 | 1.503 | 63.516 | 4225 |
| ಚರಕಾ | 0.390 | 13.323 | 3420 | 0.380 | 12.261 | 3228 |
| ಡೂಪಿಯಾನ್ | 0.770 | 23.497 | 3050 | 0.275 | 8.000 | 2900 |

# ಕ್ಷೇತ್ರಮಟ್ಟದಲ್ಲಿ ರೇಷ್ಮೆ ಭಾಗೀಧಾರರಿಗೆ ಬಲವರ್ಧನಾ ಕಾರ್ಯಕ್ರಮಗಳು



















# ಕರಕುಶಲ ವಸ್ತುಗಳ ತಯಾರಿಕೆಗೆ ಬಳಸುವ ಚಿಟ್ಟೆಕೊರೆದ ಹಾಗೂ ಕತ್ತರಿಸಿದ ಗೂಡುಗಳು















ಶಕ್ತಿ ಪ್ರಿಂಟರ್ಸ್, ನಂ. 16, 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ರಾಮಚಂದ್ರಾಪುರ, ಬೆಂಗಳೂರು–560 021